# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು–572 103

ಸಂಖ್ಯೆ :ತುವಿ:ವಿ.ವಿ.ಪ/ಸಿಂ.ವಿ/2023–24 : 936 ದಿನಾಂಕ: 23.06.2023

ಇವರಿಗೆ,

ಮಾನ್ಯ ಸಿಂಡಿಕೇಟ್‌ನ ಎಲ್ಲಾ ಸದಸ್ಯರುಗಳಿಗೆ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಮಾನ್ಯರೆ,

**ವಿಷಯ: 2022–23ನೇ ಸಾಲಿನ ಮೂರನೇ ವಿಶೇಷ ಸಿಂಡಿಕೇಟ್ ಸಭೆಯ ಕಾರ್ಯಸೂಚಿಗಳನ್ನು ಕಳುಹಿಸುತ್ತಿರುವ ಕುರಿತು**

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ 2022–23ನೇ ಸಾಲಿನ ಮೂರನೇ ವಿಶೇಷ ಸಿಂಡಿಕೇಟ್ ಸಭೆಯನ್ನು **ದಿನಾಂಕ:28.06.2023ರ ಬುಧವಾರ ಬೆಳಿಗ್ಗೆ 11:30 ಗಂಟೆಗೆ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರದ ಡಾ. ಜಗದಾಂಬ ಚಿವುಕುಲ ಕಟ್ಟಡ, ವಿಶ್ವವಿದ್ಯಾನಿಲಯ ಆವರಣ, ಬಿ.ಹೆಚ್.ರಸ್ತೆ, ತುಮಕೂರು–572103** ಇಲ್ಲಿ ಏರ್ಪಡಿಸಲಾಗಿದ್ದು, ಸದರಿ ಸಭೆಯಲ್ಲಿ ಚರ್ಚಿಸಲಿರುವ ಕಾರ್ಯಸೂಚಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ, ಕಳುಹಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಉಪಕುಲಸಚಿವರು
(ಸಿಂಡಿಕೇಟ್/ಶೈಕ್ಷಣಿಕ ಪರಿಷತ್ ವಿಭಾಗ)

ಉಪಕುಲಸಚಿವರು
(ಸಿಂಡಿಕೇಟ್/ಶೈಕ್ಷಣಿಕ ಪರಿಷತ್ ವಿಭಾಗ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

**ಅಡಕ:** ಮೂರನೇ ವಿಶೇಷ ಸಿಂಡಿಕೇಟ್ ಸಭೆಯ ಕಾರ್ಯಸೂಚಿಗಳು

**ಪ್ರತಿಗಳು:**

1. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಕಚೇರಿ ಪ್ರತಿ.

# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು– 572 103

ಸಭಾ ಸಂಖ್ಯೆ: ವಿ.ಸಿಂ–03 ದಿನಾಂಕ: 28.06.2023 ಸಮಯ: 11:30

**2022–23ನೇ ಸಾಲಿನ ಮೂರನೇ ವಿಶೇಷ ಸಿಂಡಿಕೇಟ್ ಸಭೆಯ ಕಾರ್ಯಸೂಚಿಗಳು**

| ಕ್ರ ಸಂ | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ಪುಟ ಸಂಖ್ಯೆ |
|---|---|---|---|
| | | **ಕಾಲೇಜು ಅಭಿವೃದ್ಧಿ ಪರಿಷತ್** | |
| 1. | 2022-23.ವಿ.ಸಿಂ–03 ಕಾ.ಅ.ಪ–01 | 2023–24ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಸಂಬಂಧ ಸ್ಥಳೀಯ ವಿಚಾರಣಾ ಸಮಿತಿಗಳು ಕಾಲೇಜುಗಳಿಗೆ ಭೇಟಿ ನೀಡಿ UUCMS ತಂತ್ರಾಂಶದ ಮುಖಾಂತರ ಸಲ್ಲಿಸಿರುವ ವರದಿ ಮತ್ತು ಪುನರ್ ಪರಿಶೀಲನಾ ಸಮಿತಿ ವರದಿಗಳ ಅನುಮೋದನೆ ಕುರಿತು. | 1 |
| | | **ಶೈಕ್ಷಣಿಕ ವಿಭಾಗ** | |
| 2. | 2022-23.ವಿ.ಸಿಂ–03 ಶೈ.ವಿ.–01 | ತುಮಕೂರು ವಿಶ್ವವಿದ್ಯಾನಿಲಯವು Atal Incubation Centre, SKU ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಕುರಿತು. | 2 |
| 3. | 2022-23.ವಿ.ಸಿಂ–03 ಶೈ.ವಿ.–02 | ತುಮಕೂರು ವಿಶ್ವವಿದ್ಯಾನಿಲಯದಲ್ಲಿ ನೂತನ ಕೋರ್ಸ್‌ಗಳನ್ನು ಪ್ರಾರಂಭಿಸುವ ಕುರಿತು. | 3 |
| 4. | 2022-23.ವಿ.ಸಿಂ–03 ಶೈ.ವಿ.–03 | ತುಮಕೂರು ವಿಶ್ವವಿದ್ಯಾನಿಲಯದ ವಿಜ್ಞಾನ ಕಾಲೇಜಿನ ಸ್ನಾತಕ ಸೂಕ್ಷ್ಮಜೀವಶಾಸ್ತ್ರ ಮತ್ತು ಸ್ನಾತಕ ಜೈವಿಕ ತಂತ್ರಜ್ಞಾನ ಪದವಿಯ ಪ್ರವೇಶಮಿತಿ ಹೆಚ್ಚಳ ಮಾಡಿರುವ ಕ್ರಮದ ಸ್ಥಿರೀಕರಣ ಕುರಿತು. | 4 |
| 5. | 2022-23.ವಿ.ಸಿಂ–03 ಶೈ.ವಿ.–04 | 2023–24ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ ಪದವಿಗಳ ಪ್ರಥಮ ವರ್ಷದ Programme Structure ನ ಸ್ಥಿರೀಕರಣದ ಕುರಿತು. | 5 |
| 6. | 2022-23.ವಿ.ಸಿಂ–03 ಶೈ.ವಿ.–05 | ಜೈನ ಸಂಸ್ಕೃತಿ ಸ್ನಾತಕೋತ್ತರ ಡಿಪ್ಲೋಮಾ ಕೋರ್ಸ್‌ನ ನೂತನ ಪಠ್ಯಕ್ರಮವನ್ನು ಅನುಮೋದಿಸುವ ಬಗ್ಗೆ. | 6 |
| 7. | 2022-23.ವಿ.ಸಿಂ–03 ಶೈ.ವಿ.–06 | 2023–24ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾನಿಲಯ ಕಲಾ ಕಾಲೇಜಿನ ಇತಿಹಾಸ ಮತ್ತು ರಾಜ್ಯಶಾಸ್ತ್ರ ಕೋರ್ಸುಗಳ ಪ್ರವೇಶಮಿತಿ ಹೆಚ್ಚಳ ಮಾಡಿರುವ ಕ್ರಮದ ಕುರಿತು. ಸ್ಥಿರೀಕರಣ ಕೋರಿ. | 7 |
| | | **ಪರೀಕ್ಷಾ ವಿಭಾಗ** | |
| 8. | 2022-23.ವಿ.ಸಿಂ–03 ಪ.ವಿ.01 | ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣದ ವೆಚ್ಚವನ್ನು ಪಾವತಿಸುವ ಕುರಿತು. | 8 |
| 9. | 2022-23.ವಿ.ಸಿಂ–03 ಪ.ವಿ.02 | 2023–24ನೇ ಸಾಲಿನ ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣಕ್ಕೆ ಸಂಬಂಧಿಸಿದಂತೆ, ಕರಾರು ಒಪ್ಪಂದ ಮಾಡಿಕೊಳ್ಳುವ ಕುರಿತು. | 9 |
| 10. | 2022-23.ವಿ.ಸಿಂ–03 ಪ.ವಿ.03 | 2023ರ ಮಾರ್ಚ್/ ಏಪ್ರಿಲ್/ ಮೇ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಪದವಿ ನಡೆದ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ಬಾಡಿಗೆಗೆ ಪಡೆಯಲಾಗಿರುವ ವಾಹನಗಳ ಬಾಡಿಗೆಯ ಮೊತ್ತ ಪಾವತಿಸುವ ಕುರಿತು. | 10 |
| 11. | 2022-23.ವಿ.ಸಿಂ–03 ಪ.ವಿ.04 | Dr. B. Jagadesha ಇವರಿಗೆ ತಾತ್ಕಾಲಿಕ ಡಿ.ಲಿಟ್. ಪದವಿ ಘೋಷಿಸಿ ಅಧಿಸೂಚನೆ ಹೊರಡಿಸುವ ಕುರಿತು. | 11 |
| 12. | 2022-23.ವಿ.ಸಿಂ–03 ಪ.ವಿ.05 | Dr. SOUMENDRA NATH BANDYOPADHYAY ಇವರಿಗೆ ತಾತ್ಕಾಲಿಕ ಡಿ.ಲಿಟ್. ಪದವಿ ಘೋಷಿಸಿ ಅಧಿಸೂಚನೆ ಹೊರಡಿಸುವ ಕುರಿತು. | 12 |
| 13. | 2022-23.ವಿ.ಸಿಂ–03 ಪ.ವಿ.06 | ತುಮಕೂರು ವಿಶ್ವವಿದ್ಯಾನಿಲಯದ ಹದಿನಾರನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರಧಾನ ಮಾಡುವ ಕುರಿತು. | 13 |

| | | | |
|---|---|---|---|
| | | ಅಭಿವೃದ್ಧಿ ವಿಭಾಗ | |
| 14. | 2022-23.ವಿ.ಸಿಂ-03 ಅ.ವಿ-01 | ತುಮಕೂರು ವಿಶ್ವವಿದ್ಯಾನಿಲಯವು Apollo Pharmacy, Magic Bus India Foundation, Spandana Bright Future Innovation, Teamlease Education Foundation & Nirmaan Organization ಈ ಸಂಸ್ಥೆಗಳೊಂದಿಗೆ ಒಡಂಬಡಿಕೆ (MOU) ಮಾಡಿಕೊಳ್ಳುವ ಕುರಿತು. | 14 |
| 15. | 2022-23.ವಿ.ಸಿಂ-03 ಅ.ವಿ-02 | ತುಮಕೂರು ವಿಶ್ವವಿದ್ಯಾನಿಲಯವು Indian Yoga Association, Healthcare Sector Skill Council, Rooman Technologies Pvt. Ltd & Finverse Upskilling Private Limited ಈ ಸಂಸ್ಥೆಗಳೊಂದಿಗೆ ಒಡಂಬಡಿಕೆ (MOU) ಮಾಡಿಕೊಳ್ಳುವ ಕುರಿತು. | 15 |
| 16. | 2022-23.ವಿ.ಸಿಂ-03 ಅ.ವಿ-03 | ತುಮಕೂರು ವಿಶ್ವವಿದ್ಯಾನಿಲಯವು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಗೆ ಬ್ಯಾಂಕ್ ಶಾಖೆ ಹಾಗೂ ಎ.ಟಿ.ಎಂ. ಕಟ್ಟಡಗಳ ಸ್ಥಳವಕಾಶಕ್ಕಾಗಿ ನಿಗದಿಪಡಿಸಿರುವ ಬಾಡಿಗೆ ಮೊತ್ತವನ್ನು ಕಡಿಮೆಗೊಳಿಸುವಂತೆ ಕೋರಿರುವ ಕುರಿತು. | 16 |
| | | ಖರೀದಿ ಕೋಶ | |
| 17. | 2022-23.ವಿ.ಸಿಂ-03 ಖ.ಕೋ-01 | ತುಮಕೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳು ಹಾಗೂ ಆಡಳಿತ ಕಛೇರಿಯ ವಿಭಾಗಗಳಿಗೆ ಕಂಪ್ಯೂಟರ್ ಪ್ರಿಂಟರ್ ಹಾಗೂ ಇನ್ನಿತರೆ ಎಲೆಕ್ಟ್ರಾನಿಕ್ಸ್ ಪರಿಕರಗಳನ್ನು ಸರಬರಾಜು ಮಾಡಿರುವ ಮೆ. ವಿಜಯ್ ಎಂಟರ್‌ಪ್ರೈಸಸ್, ತುಮಕೂರು ಇವರಿಗೆ ಹುಂಡಿಯ ಮೊತ್ತ ರೂ. 35,02,300/- (ರೂಪಾಯಿ ಮೂವತ್ತೈದು ಲಕ್ಷದ ಎರಡು ಸಾವಿರದ ಮೂರುನೂರು ಮಾತ್ರ) ಗಳನ್ನು ಪಾವತಿಸಲು ಸಿಂಡಿಕೇಟ್ ಸಭೆಯ ಅನುಮೋದನೆ ಕುರಿತು. | 17 |
| 18. | 2022-23.ವಿ.ಸಿಂ-03 ಖ.ಕೋ-02 | ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳಿಗೆ ಅಗತ್ಯವಿರುವ ಎಲೆಕ್ಟ್ರಾನಿಕ್ ಪೋಡಿಯಂಗಳನ್ನು ಸರಬರಾಜು ಪಡೆಯುವ ಸಂಬಂಧ ಕೈಗೊಳ್ಳಲಾದ ಟೆಂಡರ್ ಪ್ರಕ್ರಿಯೆಗೆ ಸಿಂಡಿಕೇಟ್ ಅನುಮೋದನೆ ಕೋರಿ | 18 |
| | | ಇಂಜಿನಿಯರಿಂಗ್ ವಿಭಾಗ | |
| 19. | 2022-23.ವಿ.ಸಿಂ-03 ಇಂ.ವಿ.-01 | ಶ್ರೀ ಎನ್.ವಿ. ರಾಮಮೂರ್ತಿ, ಮುಖ್ಯಸ್ಥರು, TEKNA-KON ಸಂಸ್ಥೆ, ತುಮಕೂರು ರವರ ಮನವಿಯ ಕುರಿತು. | 19 |
| | | ಸಿಬ್ಬಂದಿ ವಿಭಾಗ | |
| 20. | 2022-23.ವಿ.ಸಿಂ-03 ಸಿಬ್ಬಂದಿ ವಿ-01 | ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಂಗಾಮಿ ಸಂಚಿತ ವೇತನ ನೌಕರರಿಗೆ ಮಧ್ಯಂತರ ಪರಿಹಾರ ವಿಸ್ತರಿಸುವಂತೆ ಮನವಿ ಸಲ್ಲಿಸಿರುವ ಕುರಿತು. | 20 |
| 21. | 2022-23.ವಿ.ಸಿಂ-03 ಸಿಬ್ಬಂದಿ ವಿ-02 | ಶ್ರೀ ಬಸಬರಾಜ್ ಪಿ.ಎಸ್., ದ್ವಿತೀಯ ದರ್ಜೆ ಸಹಾಯಕರು ಇವರು ಪದೋನ್ನತಿಯನ್ನು ನೀಡುವಂತೆ ಕೋರಿರುವ ಕುರಿತು. | 21 |
| 22. | 2022-23.ವಿ.ಸಿಂ-03 ಸಿಬ್ಬಂದಿ ವಿ-03 | ಡಾ. ಸುರೇಶ್ ಬಿ.ಕೆ., ಸಹಾಯಕ ಪ್ರಾಧ್ಯಾಪಕರು ಇವರನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಉಪಕುಲಸಚಿವರ ಹುದ್ದೆಯ ಹೆಚ್ಚುವರಿ ಪ್ರಭಾರದಲ್ಲಿರಿಸಿರುವುದನ್ನು ಸ್ಥಿರೀಕರಿಸುವ ಕುರಿತು. | 22 |
| 23. | 2022-23.ವಿ.ಸಿಂ-03 ಸಿಬ್ಬಂದಿ ವಿ-04 | ವಿಶ್ವವಿದ್ಯಾನಿಲಯದಲ್ಲಿ ನೂತನವಾಗಿ ಪ್ರಾರಂಭಿಸುವ ವಿವಿಧ ಕೋರ್ಸ್‌ಗಳಿಗೆ ಸಂಯೋಜಕರನ್ನು ನೇಮಿಸಿ, ಆದೇಶಿಸಿರುವುದನ್ನು ಸ್ಥಿರೀಕರಿಸುವ ಕುರಿತು. | 23 |
| | | ಶೈಕ್ಷಣಿಕ ವಿಭಾಗ | |
| 24. | 2022-23.ವಿ.ಸಿಂ-03 ಶೈ.ವಿ.-06 | ತುಮಕೂರು ವಿಶ್ವವಿದ್ಯಾನಿಲಯದ ನೂತನ ಬಿದರಕಟ್ಟೆ ಕ್ಯಾಂಪಸ್‌ನಲ್ಲಿ ಪದವಿ ಕಾಲೇಜನ್ನು ಪ್ರಾರಂಭಿಸುವ ಕುರಿತು. | 24 |
| | | ಸಂಶೋಧನಾ ವಿಭಾಗ | |
| 25. | 2022-23.ವಿ.ಸಿಂ-03 ಸಂ.ವಿ.-06 | 2015-16ನೇ ಸಾಲಿನ ಸಂಶೋಧನಾರ್ಥಿಗಳ ಪಿಹೆಚ್.ಡಿ ಸಂಶೋಧನೆಯಲ್ಲಿ ಅವಧಿ ವಿಸ್ತರಿಸುವ ಕುರಿತು. | 25 |

| ವಿಷಯ ಸಂಖ್ಯೆ: | 2023: ವಿ.ಸಿಂ-03: ಕಾ.ಅ.ಪ-01: ದಿನಾಂಕ: 28.06.2023 |
| --- | --- |

ವಿಷಯ: **2023-24ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಸಂಬಂಧ ಸ್ಥಳೀಯ ವಿಚಾರಣಾ ಸಮಿತಿಗಳು ಕಾಲೇಜುಗಳಿಗೆ ಭೇಟಿ ನೀಡಿ UUCMS ತಂತ್ರಾಂಶದ ಮುಖಾಂತರ ಸಲ್ಲಿಸಿರುವ ವರದಿ ಮತ್ತು ಪುನರ್ ಪರಿಶೀಲನಾ ಸಮಿತಿ ವರದಿಗಳ ಅನುಮೋದನೆ ಕುರಿತು.**

* * * * *

ತುಮಕೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡ ವಿವಿಧ ಕಾಲೇಜುಗಳು 2023-24ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆ ಮುಂದುವರಿಕೆಗೆ / ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಪ್ರವೇಶಮಿತಿ ಹೆಚ್ಚಳ / ಹೊಸ ಕೋರ್ಸು / ಹೊಸ ಕಾಲೇಜು / ಶಾಶ್ವತ ಸಂಯೋಜನೆ ನವೀಕರಣ / Extension of Existing Permanent Affiliation ಕಾಲೇಜಿನ ಹೆಸರು / ಕಾಲೇಜುಗಳ ಸ್ಥಳ ಬದಲಾವಣೆ / ವ್ಯಾಸಂಗ ಕ್ರಮದ ಮುಚ್ಚುವಿಕೆಗೆ ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

ಕಾಲೇಜುಗಳ ಸಂಯೋಜನೆ ಕುರಿತು ವಿಶ್ವವಿದ್ಯಾನಿಲಯವು ರಚಿಸಿದ್ದ ಸ್ಥಳೀಯ ವಿಚಾರಣಾ ಸಮಿತಿಗಳು ಭೇಟಿ ನೀಡಿ, ತಪಾಸಣೆ ನಡೆಸಿ, UUCMS ತಂತ್ರಾಂಶದ ಮುಖಾಂತರ ವರದಿಗಳನ್ನು ಸಲ್ಲಿಸಿರುತ್ತಾರೆ. (ಸದರಿ ಕಾಲೇಜುಗಳ ವರದಿಗಳಿಗೆ ಸಂಬಂಧಿಸಿದ ವಿವರವಾದ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ).

ದಿನಾಂಕ 19.06.2023ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಸ್ಥಳೀಯ ವಿಚಾರಣಾ ಸಮಿತಿಗಳು ಸಲ್ಲಿಸಿದ್ದ ವರದಿಗಳನ್ನು ಪರಿಶೀಲಿಸಿ ಕೆಲವು ಕಾಲೇಜುಗಳ ಪುನರ್ ಪರಿಶೀಲನೆಗೆ ನಿರ್ಣಯ ಕೈಗೊಂಡ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯವು ರಚಿಸಿದ್ದ ಪುನರ್ ಪರಿಶೀಲನಾ ಸಮಿತಿಗಳು ಕಾಲೇಜುಗಳಿಗೆ ಭೇಟಿ ನೀಡಿ ಸಲ್ಲಿಸುವ ವರದಿ ಹಾಗೂ ಮೇಲ್ಕಂಡ ವಿವಿಧ ಸಂಯೋಜನೆ ಸಂಬಂಧ ಸ್ಥಳೀಯ ವಿಚಾರಣಾ ಸಮಿತಿಗಳು ಸಲ್ಲಿಸಿರುವ ವರದಿಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022–23: ವಿ.ಸಿಂ–03: ಶೈವಿ : 01 ದಿನಾಂಕ: 28.06.2023 |
|---|---|

**ವಿಷಯ: ತುಮಕೂರು ವಿಶ್ವವಿದ್ಯಾನಿಲಯವು Atal Incubation Centre, SKU ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಕುರಿತು**

*****

ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಇನ್‌ಕ್ಯುಬೇಷನ್ ಸೆಂಟರ್ ಸ್ಥಾಪನೆಗೆ ಸಕ್ಷಮ ಪ್ರಾಧಿಕಾರಿಗಳು ಅನುಮೋದಿಸಿರುತ್ತವೆ. ಈ ಹಿನ್ನೆಲೆಯಲ್ಲಿ ಇನ್‌ಕ್ಯುಬೇಷನ್ ಸೆಂಟರ್‌ನ ಕಾರ್ಯಚಟುವಟಿಕೆಗಳಿಗೆ ಅನುಕೂಲವಾಗುವಂತೆ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ, ಅನಂತಪುರ ಇಲ್ಲಿರುವ ಅಟಲ್ ಇನ್‌ಕ್ಯುಬೇಷನ್ ಸೆಂಟರ್ ಜೊತೆಗೆ ಶೈಕ್ಷಣಿಕ ಸಹಯೋಗದ ಪ್ರಸ್ತಾಪ ಸ್ವೀಕೃತವಾಗಿರುತ್ತದೆ. ಸದರಿ ಒಡಂಬಡಿಕೆ ಮಾಡಿಕೊಂಡಲ್ಲಿ ಅಟಲ್ ಇನ್‌ಕ್ಯುಬೇಷನ್ ಸೆಂಟರ್ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಇನ್‌ಕ್ಯುಬೇಷನ್ ಸೆಂಟರ್ ಸ್ಥಾಪನೆಗೆ ಸಂಬಂಧಿಸಿದಂತೆ, ಎಲ್ಲಾ ವಿಷಯಗಳಲ್ಲಿ ಸಹಕಾರ ಹಾಗೂ ಮಾರ್ಗದರ್ಶನ ನೀಡಲಿದೆ. ಇನ್‌ಕ್ಯುಬೇಷನ್ ಕುರಿತಾದ ಮಾರ್ಗಸೂಚಿಗಳು, ನಿಯಮಗಳು ರೂಪಿಸುವುದರಿಂದ ಮೊದಲಾಗಿ ಅಟಲ್ ಇನ್‌ಕ್ಯುಬೇಷನ್ ಸೆಂಟರ್‌ನ ತಜ್ಞರ, ಮಾರ್ಗದರ್ಶಕರ, ಒಡಂಬಡಿಕೆಗಳ ಪ್ರಯೋಜನ ಹಾಗೂ ವಿದ್ಯಾರ್ಥಿಗಳಿಗೆ ಉಚಿತ ಇಂಟರ್ನ್‌ಷಿಪ್ ತರಬೇತಿ ಕಾರ್ಯಕ್ರಮಗಳು ಇತ್ಯಾದಿಗಳ ಪ್ರಯೋಜನ ವಿಶ್ವವಿದ್ಯಾನಿಲಯಕ್ಕೆ ಸಿಗಲಿದೆ. ಈ ಶೈಕ್ಷಣಿಕ ಒಡಂಬಡಿಕೆಗೆ ರೂ. 1,00,000-00 ಪಾವತಿಸಬೇಕಾಗಿದ್ದು, ಅಟಲ್ ಇನ್‌ಕ್ಯುಬೇಷನ್ ಸೆಂಟರ್, ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ, ಅನಂತಪುರ ಇವರೊಂದಿಗೆ ಶೈಕ್ಷಣಿಕ ಸಹಯೋಗದ ಒಡಂಬಡಿಕೆ ಕುರಿತು ವಿಶೇಷ ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022-23 : ವಿ.ಸಿಂ.ಸ:03 ತ್ರೈ.ವಿ.:02 ದಿನಾಂಕ:28.06.2023 |
|---|---|

**ವಿಷಯ: ತುಮಕೂರು ವಿಶ್ವವಿದ್ಯಾನಿಲಯದಲ್ಲಿ ನೂತನ ಕೋರ್ಸ್‌ಗಳನ್ನು ಪ್ರಾರಂಭಿಸುವ ಕುರಿತು.**

*****

ತುಮಕೂರು ವಿಶ್ವವಿದ್ಯಾನಿಲಯವು ಪ್ರಸ್ತುತ 2023-24ನೇ ಶೈಕ್ಷಣಿಕ ಸಾಲಿಗೆ ಸಂಬಂಧಿಸಿದಂತೆ ಎಲ್.ಎಲ್.ಎಂ.(LLM), PG Diploma in Information Technology act, Jain Studies, Human rights, Intelectual Property rights, Human Resource Management, Academic Writing and Publication, M.Sc. in Computer Science and M.Sc. in Data Science, B.Sc. in Electronics and Communication, Bachelor of Design (Fashion Design and Interior Design) ಕೋರ್ಸ್‌ಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಈ ಸಂಬಂಧ ಮೇಲ್ಕಂಡ ನೂತನ ಕೋರ್ಸ್‌ಗಳನ್ನು ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಿಸುವ ವಿಷಯವನ್ನು ದಿನಾಂಕ: 17.05.2023 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿದ್ದು, ಸದರಿ ಸಭೆಯು ಕೆಳಕಂಡಂತೆ ನಿರ್ಣಯಿಸಿರುತ್ತದೆ.

**ನಿರ್ಣಯ : ತುಮಕೂರು ವಿಶ್ವವಿದ್ಯಾನಿಲಯದಲ್ಲಿ 2023-24ನೇ ನೇ ಸಾಲಿನಿಂದ ಹೊಸ ಕೋರ್ಸುಗಳಾದ LLM, PG Diploma Programmes – (Information technology, Human Rights, Intelectual Property Rights, Human Resource Management, Research Methodology and Statistics), B.Sc- Fashion Technology, Interior Designing, BCA-Data Science, BCA-Cyber Security & BCA- Cloud Computing ಹಾಗೂ ಇತ್ಯಾದಿ ಕಾರ್ಯಕ್ರಮಗಳನ್ನು ಪ್ರಾರಂಭಿಸುವ ಸಂಬಂಧ ಕೂಲಂಕಷವಾಗಿ ಚರ್ಚಿಸಿದ ಸಭೆಯು ಈ ಕುರಿತು ಸಮಿತಿಯು ಸಲ್ಲಿಸಿರುವ ಸಭಾ ನಡಾವಳಿಯಂತೆ ನಿಯಮಾನುಸಾರ ಕ್ರಮ ಕೈಗೊಳ್ಳಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.**

**ಮುಂದುವರೆದು, University College of Allied Health Sciences, University College of Engineering ಹೊಸ ಕಾಲೇಜುಗಳನ್ನು ಪ್ರಾರಂಭಿಸುವ ಸಂಬಂಧ ಸಮಿತಿಯ ಶಿಫಾರಸ್ಸಿನಂತೆ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲು ಮಾನ್ಯ ಕುಲಪತಿಯವರಿಗೆ ಸಭೆಯು ಅಧಿಕಾರ ನೀಡಲಾಯಿತು.**

ಈ ಸಂಬಂಧ ಮೇಲ್ಕಂಡ ನೂತನ ಕೋರ್ಸ್‌ಗಳನ್ನು ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಿಸುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಮೋದನೆ ಹಾಗೂ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022–23: ವಿ.ಸಿಂ–3: ಶೈವಿ :03:ದಿನಾಂಕ:28.06.2023 |
|---|---|

**ವಿಷಯ** : ತುಮಕೂರು ವಿಶ್ವವಿದ್ಯಾನಿಲಯದ ವಿಜ್ಞಾನ ಕಾಲೇಜಿನ ಸ್ನಾತಕ ಸೂಕ್ಷ್ಮಜೀವಶಾಸ್ತ್ರ ಮತ್ತು ಸ್ನಾತಕ ಜೈವಿಕ ತಂತ್ರಜ್ಞಾನ ಪದವಿಯ ಪ್ರವೇಶಮಿತಿ ಹೆಚ್ಚಳ ಮಾಡಿರುವ ಕ್ರಮದ ಸ್ಥಿರೀಕರಣ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮುಖ್ಯಸ್ಥರು, ಸ್ನಾತಕ ಸೂಕ್ಷ್ಮಜೀವಶಾಸ್ತ್ರ ವಿಭಾಗ ಮತ್ತು ಮುಖ್ಯಸ್ಥರು, ಸ್ನಾತಕ ಜೈವಿಕ ತಂತ್ರಜ್ಞಾನ ವಿಭಾಗ, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರು ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರ ಮುಖಾಂತರ ಸಲ್ಲಿಸಿರುವ ಮನವಿ ಪತ್ರದಲ್ಲಿ ಪ್ರಸ್ತುತ ಸ್ನಾತಕ ಸೂಕ್ಷ್ಮಜೀವಶಾಸ್ತ್ರ ಮತ್ತು ಸ್ನಾತಕ ಜೈವಿಕ ತಂತ್ರಜ್ಞಾನ ವಿಷಯಕ್ಕೆ ತಲಾ 48 ಪ್ರವೇಶಮಿತಿ ಇದ್ದು, ತಲಾ 12 ಸೀಟುಗಳನ್ನು ಹೆಚ್ಚಿಸಬೇಕೆಂದು ಕೋರಿದ್ದು, 2023–24ನೇ ಶೈಕ್ಷಣಿಕ ಸಾಲಿನಿಂದ ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಸಕ್ಷಮ ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿಕೊಂಡು ಸ್ನಾತಕ ಸೂಕ್ಷ್ಮಜೀವಶಾಸ್ತ್ರ ಮತ್ತು ಸ್ನಾತಕ ಜೈವಿಕ ತಂತ್ರಜ್ಞಾನ ಕಾರ್ಯಕ್ರಮಗಳಿಗೆ ಪ್ರಸ್ತುತ ಇರುವ ಪ್ರವೇಶಮಿತಿ 48ರ ಜೊತೆಗೆ ತಲಾ 12 ಸೀಟುಗಳ ಹೆಚ್ಚುವರಿ ಪ್ರವೇಶಮಿತಿಯಂತೆ ತಲಾ ಒಟ್ಟು ಪ್ರವೇಶಮಿತಿ 60ಕ್ಕೆ ನಿಗದಿಪಡಿಸಲಾಗಿದೆ.

ಈ ಸಂಬಂಧ ಸದರಿ ವಿಷಯವನ್ನು ವಿಶೇಷ ಸಿಂಡಿಕೇಟ್ ಸಭೆಯ ಸ್ಥಿರೀಕರಣ ಕೋರಿ ಮಂಡಿಸಿದೆ.

| ವಿಷಯ ಸಂಖ್ಯೆ | **2022–23: ವಿ.ಸಿಂ–3: ಶೈವಿ:04:ದಿನಾಂಕ:28.06.2023** |
|---|---|

ವಿಷಯ : 2023–24ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ ಪದವಿಗಳ ಪ್ರಥಮ ವರ್ಷದ Programme Structure ನ ಸ್ಥಿರೀಕರಣದ ಕುರಿತು.

*****

ವಿವಿಧ ಸ್ನಾತಕ ಪದವಿಗಳ 2023–24ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಕಾರ್ಯಕ್ರಮಗಳ ವಿನ್ಯಾಸ (Programme Structure) ನ್ನು ರಚಿಸಲಾಗಿದ್ದು, ಈ ಸಂಬಂಧ ಈ ಕಚೇರಿ ಸಂಖ್ಯೆ:ತುವಿ:ಶೈವಿ:2023–24/617 ದಿನಾಂಕ 30.05.2023 ರಂದು ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಸಕ್ಷಮ ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ ಕಾರ್ಯಕ್ರಮಗಳ ವಿನ್ಯಾಸವನ್ನು ಘಟಕ ಹಾಗೂ ಸಂಯೋಜಿತ ಕಾಲೇಜುಗಳು ಅಳವಡಿಸಿಕೊಳ್ಳುವ ಕುರಿತು ಸುತ್ತೋಲೆ ಹೊರಡಿಸಲಾಗಿರುತ್ತದೆ.

ಈ ಸಂಬಂಧ ಸದರಿ ವಿಷಯವನ್ನು ವಿಶೇಷ ಸಿಂಡಿಕೇಟ್ ಸಭೆಯ ಸ್ಥಿರೀಕರಣ ಕೋರಿ ಮಂಡಿಸಿದೆ.

| ವಿಷಯ ಸಂಖ್ಯೆ | 2022–23 : .ವಿ.ಸಿಂ.ಸ:03 ಶೈ.ವಿ.:05 ದಿನಾಂಕ:28.06.2023 |
|---|---|

**ವಿಷಯ: ಜೈನ ಸಂಸ್ಕೃತಿ ಸ್ನಾತಕೋತ್ತರ ಡಿಪ್ಲೋಮಾ ಕೋರ್ಸ್‌ನ ನೂತನ ಪಠ್ಯಕ್ರಮವನ್ನು ಅನುಮೋದಿಸುವ ಬಗ್ಗೆ**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಡಾ. ವೆಂಕಟರೆಡ್ಡಿ ರಾಮರೆಡ್ಡಿ, ಸಂಯೋಜಕರು, ಜೈನ ಸಂಸ್ಕೃತಿ ಸ್ನಾತಕೋತ್ತರ ಡಿಪ್ಲೋಮಾ ಕೋರ್ಸ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರು ದಿನಾಂಕ:17.03.2023 ರಂದು ಜೈನ ಸಂಸ್ಕೃತಿ ಸ್ನಾತಕೋತ್ತರ ಡಿಪ್ಲೋಮಾ ಕೋರ್ಸ್ ವಿಷಯದ ಅಧ್ಯಯನ ಮಂಡಳಿಯ ಸಭೆಯನ್ನು ನಡೆಸಿ, ಸದಸ್ಯರುಗಳ ಅನುಮೋದನೆ ಪಡೆದು, ನೂತನ ಪಠ್ಯಕ್ರಮವನ್ನು ಸಿದ್ದಪಡಿಸಿ ವಿಶ್ವವಿದ್ಯಾನಿಲಯಕ್ಕೆ ದಿನಾಂಕ:21.04.2023ರ ಪತ್ರದೊಂದಿಗೆ ಸಲ್ಲಿಸಿರುತ್ತಾರೆ.

ಆದ್ದರಿಂದ, ಸದರಿ ಜೈನ ಸಂಸ್ಕೃತಿ ಸ್ನಾತಕೋತ್ತರ ಡಿಪ್ಲೋಮಾ ಕೋರ್ಸ್ ವಿಷಯದ ನೂತನ ಪಠ್ಯಕ್ರಮವನ್ನು ಅಳವಡಿಸಿಕೊಳ್ಳಲು ಅಧಿಸೂಚನೆ ಹೊರಡಿಸುವ ಕುರಿತು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022–23: ವಿ.ಸಿಂ–3: ಶೈವಿ :06:ದಿನಾಂಕ:28.06.2023 |
|---|---|

**ವಿಷಯ:2023–24ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾನಿಲಯ ಕಲಾ ಕಾಲೇಜಿನ ಇತಿಹಾಸ ಮತ್ತು ರಾಜ್ಯಶಾಸ್ತ್ರ ಕೋರ್ಸುಗಳ ಪ್ರವೇಶಮಿತಿ ಹೆಚ್ಚಳ ಮಾಡಿರುವ ಕ್ರಮದ ಕುರಿತು ಸ್ಥಿರೀಕರಣ ಕೋರಿ.**

* * *

ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿದ್ಯಾನಿಲಯ ಕಲಾ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರು 2023–24ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾನಿಲಯ ಕಲಾ ಕಾಲೇಜಿನ ಸ್ನಾತಕ ಇತಿಹಾಸ ಮತ್ತು ರಾಜ್ಯಶಾಸ್ತ್ರ ಕೋರ್ಸುಗಳ ಪ್ರವೇಶಮಿತಿಯನ್ನು ಶೇಕಡ 20 ರಷ್ಟು ಹೆಚ್ಚಿಸುವಂತೆ ಕೋರಿ ಮನವಿ ಸಲ್ಲಿಸಿದ್ದು, ತತ್ಸಂಬಂಧ ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯದ ಸಕ್ಷಮ ಪ್ರಾಧಿಕಾರಗಳ ನಿರ್ಣಯವನ್ನು ಕಾಯ್ದಿರಿಸಿ, ಪ್ರಸ್ತುತ 2023–24ನೇ ಶೈಕ್ಷಣಿಕ ಸಾಲಿನಿಂದ ಹಾಲಿ ಅಸ್ತಿತ್ವದಲ್ಲಿರುವ ಸ್ನಾತಕ ಇತಿಹಾಸ ಕೋರ್ಸಿನ ಪ್ರವೇಶಮಿತಿ 288ಕ್ಕೆ ಶೇಕಡ 20 ರಷ್ಟು ಹೆಚ್ಚಿಸಿ ಒಟ್ಟು ಪ್ರವೇಶಮಿತಿ 346 ಕ್ಕೆ ಹಾಗೂ ಸ್ನಾತಕ ರಾಜ್ಯಶಾಸ್ತ್ರ ಕೋರ್ಸಿನ ಪ್ರವೇಶಮಿತಿ 240ಕ್ಕೆ ಶೇಕಡ 20 ರಷ್ಟು ಹೆಚ್ಚಿಸಿ ಒಟ್ಟು ಪ್ರವೇಶಮಿತಿ 288ಕ್ಕೆ ನಿಗದಿಪಡಿಸಿ ಈ ಕಚೇರಿ ಅಧಿಸೂಚನೆ ಸಂಖ್ಯೆ:ತುವಿ:ಶೈವಿ:2023–24:993 ದಿನಾಂಕ 21.06.2023 ರಂದು ಅಧಿಸೂಚಿಸಲಾಗಿರುತ್ತದೆ.

ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣ ಕೋರಿದೆ.

| ವಿಷಯ: ಸಂಖ್ಯೆ: | 2022–23:. ವಿ.ಸಿಂ:03 ಪ.ವಿ. 01 ದಿ.:28.06.2023 |
|---|---|

**ವಿಷಯ: ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣದ ವೆಚ್ಚವನ್ನು ಪಾವತಿಸುವ ಕುರಿತು.**

* * * * * * *

ತುಮಕೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಹಾಗೂ ಪಿಹೆಚ್.ಡಿ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯವು ನಂಬಿಗಸ್ಥ ಸಂಸ್ಥೆಯೊಂದಿಗೆ ದಿನಾಂಕ: 24.06.2022 ರಿಂದ ದಿನಾಂಕ: 23.06.2023 ರವರೆಗೆ ಅನ್ವಯವಾಗುವಂತೆ ಸಿಂಡಿಕೇಟ್ ಸಭಾ ನಿರ್ಣಯದಂತೆ ಒಂದು ವರ್ಷದ ಅವಧಿಗೆ ಕರಾರು ಒಪ್ಪಂದ ಮಾಡಿಕೊಂಡಿದ್ದು, ದಿನಾಂಕ: 26.08.2022 ರ ಸಿಂಡಿಕೇಟ್ ಸಭೆಯು ಸ್ಥಿರೀಕರಿಸಿರುತ್ತದೆ.

ಸದರಿ ಕರಾರು ಒಪ್ಪಂದದ ಪ್ರಕಾರ **2023** ರ ಮಾರ್ಚ್/ಏಪ್ರಿಲ್/ಮೇ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಹಾಗೂ ಪಿಹೆಚ್.ಡಿ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣ ಕಾರ್ಯವನ್ನು ನಿರ್ವಹಿಸಲಾಗಿರುತ್ತದೆ. ಸದರಿ ಸಂಸ್ಥೆಯವರು ಹುಂಡಿಯನ್ನು ಪಾವತಿಸುವಂತೆ ಕೋರಿದ್ದು, ವಿವರಗಳು ಈ ಕೆಳಕಂಡಂತಿರುತ್ತವೆ.

| ಕ್ರ.ಸಂ. | ವಿವರಗಳು | ಮೊತ್ತ |
|---|---|---|
| 1. | 2023 ರ ಮಾರ್ಚ್/ಏಪ್ರಿಲ್/ಮೇ ಮಾಹೆಯಲ್ಲಿ ನಡೆದ ವಿವಿಧ ಸ್ನಾತಕ ಪದವಿ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣ ವೆಚ್ಚ | **22,25,488–00** |
| 2. | 2023 ರ ಏಪ್ರಿಲ್/ಮೇ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕೋತ್ತರ ಪದವಿ ಮತ್ತು ಪಿಹೆಚ್.ಡಿ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣ ವೆಚ್ಚ | **5,71,252–00** |
| | **ಒಟ್ಟು ಮೊತ್ತ** | **27,96,740–00** |

ಸದರಿ ಹುಂಡಿಯ ಮೊತ್ತ ರೂ.**27,96,740–00** (ರೂಪಾಯಿ ಇಪ್ಪತ್ತೇಳು ಲಕ್ಷದ ತೊಂಭತ್ತಾರು ಸಾವಿರದ ಏಳುನೂರ ನಲವತ್ತು ಮಾತ್ರ) ಗಳನ್ನು ಮಾನ್ಯ ಕುಲಪತಿಗಳ ಅನುಮೋದನೆಯಂತೆ ಸಂಬಂಧಿಸಿದ ಸಂಸ್ಥೆಗೆ ಈಗಾಗಲೇ ಹಣ ಪಾವತಿಸಲಾಗಿದ್ದು, ಸದರಿ ವಿಷಯವನ್ನು **ದಿನಾಂಕ:28.06.2023 ರಂದು ನಡೆಯುವ ಮೂರನೇ ವಿಶೇಷ ಸಿಂಡಿಕೇಟ್ ಸಭೆಯ** ಸ್ಥಿರೀಕರಣಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ : | 2022–23:. ವಿ.ಸಿಂ:03 ಪ.ವಿ. 02 ದಿ.:28.06.2023 |
|---|---|

**ವಿಷಯ: 2023–24 ನೇ ಸಾಲಿನ ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣಕ್ಕೆ ಸಂಬಂಧಿಸಿದಂತೆ ಕರಾರು ಒಪ್ಪಂದ ಮಾಡಿಕೊಳ್ಳುವ ಕುರಿತು.**

******

ತುಮಕೂರು ವಿಶ್ವವಿದ್ಯಾನಿಲಯದ ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣಕ್ಕೆ ಸಂಬಂಧಿಸಿದಂತೆ, ನಂಬಿಕಸ್ಥ ಸಂಸ್ಥೆಯೊಂದಿಗೆ ದಿನಾಂಕ: 24.06.2022 ರಿಂದ ದಿನಾಂಕ: 23.06.2023 ರವರೆಗೆ ಅನ್ವಯವಾಗುವಂತೆ ಸಿಂಡಿಕೇಟ್ ಸಭಾ ನಿರ್ಣಯದಂತೆ ಒಂದು ವರ್ಷದ ಅವಧಿಗೆ ದರ ಕರಾರು ಒಪ್ಪಂದ ಮಾಡಿಕೊಳ್ಳಲಾಗಿತ್ತು. ಈ ಅವಧಿಯು ಮುಕ್ತಾಯವಾಗುತ್ತಿದ್ದು, ಸದರಿ ಸಂಸ್ಥೆಯವರು ತಮ್ಮ ಪತ್ರದಲ್ಲಿ Printing & supply ನಲ್ಲಿ ಹಿಂದಿನ ಕರಾರು ಒಪ್ಪಂದಕ್ಕಿಂತ 15% ರಷ್ಟು ದರವನ್ನು ಹೆಚ್ಚಿಸುವಂತೆ ಕೋರಿರುತ್ತಾರೆ.

ಸದರಿ ಸಂಸ್ಥೆಯವರು 2017–18 ನೇ ಸಾಲಿನಿಂದ 2022–23 ನೇ ಶೈಕ್ಷಣಿಕ ಸಾಲಿನವರೆಗೂ ರಹಸ್ಯ ಮುದ್ರಣಾ ಕಾರ್ಯವನ್ನು ಬಹಳ ಯಶಸ್ವಿಯಾಗಿ ನಿರ್ವಹಿಸುತ್ತಾ ಬಂದಿದ್ದು, ಸದರಿ ಸಂಸ್ಥೆಯವರು ವಿಶ್ವವಿದ್ಯಾನಿಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆಯಡಿಯಲ್ಲಿ (UUCMS) ನಡೆಸಲಾದ ಪರೀಕ್ಷೆಗಳ ತುರ್ತು ಸಂದರ್ಭದಲ್ಲಿಯೂ ಸಹ ಉತ್ತಮ ಸೇವೆಯನ್ನು ಒದಗಿಸಿರುತ್ತಾರೆ. ಪ್ರಸ್ತುತ ಸದರಿ ಸಂಸ್ಥೆಯು ಕೋರಿರುವ ಮಾಹಿತಿಯನ್ನು **ದಿನಾಂಕ:28.06.2023 ರಂದು ನಡೆಯುವ ಮೂರನೇ ವಿಶೇಷ ಸಿಂಡಿಕೇಟ್ ಸಭೆಯ** ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022–23:. ವಿ.ಸಿಂ:03 ಪ.ವಿ. 03 ದಿ.:28.06.2023 |
|---|---|

**ವಿಷಯ : 2023 ರ ಮಾರ್ಚ್/ಏಪ್ರಿಲ್/ಮೇ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಪದವಿ ನಡೆದ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಬಾಡಿಗೆಗೆ ಪಡೆಯಲಾಗಿರುವ ವಾಹನಗಳ ಬಾಡಿಗೆಯ ಮೊತ್ತ ಪಾವತಿಸುವ ಕುರಿತು.**

******

ವಿಶ್ವವಿದ್ಯಾನಿಲಯದ ಶೈಕ್ಷಣಿಕ/ಪರೀಕ್ಷಾ/ಇತರೆ ಕಾರ್ಯಗಳಿಗಾಗಿ ವಿವಿಧ ಮಾದರಿಯ ವಾಹನಗಳನ್ನು ಬಾಡಿಗೆ ಪಡೆಯುವ ಸಲುವಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಿ (ಟೆಂಡರ್ ಅಧಿಸೂಚನೆ ಸಂಖ್ಯೆ: TU/G&D/Ex.V/2022-23/3017/Pc/CALL-3 Dated:09.02.2023) ಟೆಂಡರ್‌ನಲ್ಲಿ ಯಶಸ್ವಿಯಾದ ಮೆ॥ ಆನಂದ್ ಟೂರ್ಸ್ ಅಂಡ್ ಟ್ರಾವೆಲ್ಸ್, ತುಮಕೂರು ಇವರೊಂದಿಗೆ ದಿನಾಂಕ:27.03.2023 ರ ಕರಾರು ಒಪ್ಪಂದದ ಮಾಡಿಕೊಂಡಿರುತ್ತದೆ. ಇವರ ಅವಧಿಯು ದಿನಾಂಕ:27.03.2023 ರಿಂದ 26.03.2024 ಕ್ಕೆ ಒಂದು ವರ್ಷದ ಅವಧಿಗೆ ಕರಾರು ಒಪ್ಪಂದದಂತೆ ಅಧಿಸೂಚಿಸಿರುವ ಷರತ್ತುಗಳಂತೆ ವಿವಿಧ ಮಾದರಿಯ ಬಾಡಿಗೆ ವಾಹನಗಳ ಸೇವೆಯನ್ನು ನಿಯಮಾನುಸಾರ ಪಡೆಯಲು ಆದೇಶಿಸಲಾಗಿದೆ.

**2023 ರ ಮಾರ್ಚ್/ಏಪ್ರಿಲ್/ಮೇ** ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಪದವಿಯ ಎನ್.ಇ.ಪಿ/ ಸಿ.ಬಿ.ಸಿ.ಎಸ್/ ಡಬಲ್ ದಿ ಡ್ಯೂರೇಷನ್ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ **ದಿನಾಂಕ:27.03.2023 ರಿಂದ ದಿನಾಂಕ:20.05.2023** ರವರೆಗೆ ಪ್ರಶ್ನೆ ಪತ್ರಿಕೆಗಳನ್ನು ವಿವಿಧ ಪರೀಕ್ಷಾ ಕೇಂದ್ರಗಳಿಗೆ ವಿತರಿಸಲು, ಉತ್ತರ ಪುಸ್ತಕಗಳನ್ನು ವಿವಿಧ ಪರೀಕ್ಷಾ ಕೇಂದ್ರಗಳಿಂದ ವಿಶ್ವವಿದ್ಯಾನಿಲಯಕ್ಕೆ ತರಲು ಹಾಗೂ ಜಾಗೃತದಳದ ಕಾರ್ಯಗಳಿಗಾಗಿ ಸದರಿ ಕರಾರು ಒಪ್ಪಂದದನ್ವಯ ವಿವಿಧ ಮಾದರಿಯ ವಾಹನಗಳನ್ನು ಮೆ॥ ಆನಂದ್ ಟೂರ್ಸ್ ಅಂಡ್ ಟ್ರಾವೆಲ್ಸ್, ತುಮಕೂರು ಇವರಿಂದ ಬಾಡಿಗೆಗೆ ಪಡೆಯಲಾಗಿರುತ್ತದೆ. ಈ ಸಂಬಂಧ ಸದರಿ ಸಂಸ್ಥೆಯವರು ಬಾಡಿಗೆಯ ಮೊತ್ತವನ್ನು ಪಾವತಿಸುವಂತೆ ಸಲ್ಲಿಸಿದ ಹುಂಡಿಯ ಮೊತ್ತ **ರೂ. 7,94,475–00/– (ರೂಪಾಯಿ ಏಳು ಲಕ್ಷದ ತೊಂಭತ್ತ ನಾಲ್ಕು ಸಾವಿರದ ನಾಲ್ಕುನೂರ ಎಪ್ಪತ್ತೈದು ಮಾತ್ರ)** ಗಳನ್ನು **ದಿನಾಂಕ:30.05.2023 ರ ಕಚೇರಿ ಆದೇಶದಂತೆ ಮೆ॥ ಆನಂದ್ ಟೂರ್ಸ್ ಅಂಡ್ ಟ್ರಾವೆಲ್ಸ್, ತುಮಕೂರು** ಇವರಿಗೆ ಈಗಾಗಲೇ ಪಾವತಿಸಲಾಗಿದೆ. ಸದರಿ ವಿಷಯವನ್ನು **ದಿನಾಂಕ:28.06.2023 ರಂದು ನಡೆಯುವ ಮೂರನೇ ವಿಶೇಷ ಸಿಂಡಿಕೇಟ್ ಸಭೆಯ** ಸ್ಥಿರೀಕರಣಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022-23:. ವಿ.ಸಿಂ:03 ಪ.ವಿ. 04 ದಿ.:28.06.2023 |
|---|---|

**ವಿಷಯ: Dr B.Jagadesha. ಇವರಿಗೆ ತಾತ್ಕಾಲಿಕ ಡಿ.ಲಿಟ್. ಪದವಿ ಘೋಷಿಸಿ ಅಧಿಸೂಚನೆ ಹೊರಡಿಸುವ ಕುರಿತು**

*****

**Dr B. Jagadesha** ಇವರು ತುಮಕೂರು ವಿಶ್ವವಿದ್ಯಾನಿಲಯದಿಂದ ಡಿ.ಲಿಟ್ ಪದವಿ ಪಡೆಯುವ ಸಂಬಂಧ **"PERCEPTION ON COVID - 19 BY POSITIVE PERSONS AND STAKEHOLDERS: A SOCIAL WORK PERSPECTIVE FOR THE NEW NORMAL"**ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಸಲ್ಲಿಸಿದ್ದು, ಸದರಿ ಮಹಾಪ್ರಬಂಧವನ್ನು ಈ ಕೆಳಕಂಡ ಐದು ವಿಷಯ ತಜ್ಞರುಗಳಿಂದ ಮೌಲ್ಯಮಾಪನ ಮಾಡಿಸಲಾಗಿರುತ್ತದೆ.

1. Prof. A.Thirumoorthy, Department of Psychiatic Social Work, NIMHANS, Hosur Road, Bengaluru-560029, Mob No. 9731104279

2. Sangeetha R. Mane, Professor & Chairperson, Department of Social Work, Karnataka University, Dharwad – 580003 Mob No: 9880866796

3. Prof. Shivappa R, Professor, Department of Studies in Social Work, Manasagangotri, University of Mysore, Mysuru – 570005, Mob No. 9448184914

4. Prof. Sanjai Bhatt, Professor ,Department of Social Work, University of Delhi, Delhi – 110007, Mob No. 981151663

5. Prof. Nalini, Professor, Department of Social Work, Pondicherry University, Venkat Raman Nagar, Punducherry – 605014 Mob No: 9489145171

ಮೇಲ್ಕಂಡ ಮೌಲ್ಯಮಾಪಕರುಗಳಲ್ಲಿ ಮೌಖಿಕ ಪರೀಕ್ಷೆ ನಡೆಸಲು **Prof.A.Thirumoorthy** ಇವರನ್ನು ಸಂಯೋಜಕರನ್ನಾಗಿ ಮತ್ತು **Prof.SangeethaRMane,** ಹಾಗೂ **Prof. R.Shivappa** ಇವರುಗಳನ್ನು ಸದಸ್ಯರುಗಳನ್ನಾಗಿ ಮಾನ್ಯ ಕುಲಪತಿಯವರು ನೇಮಿಸಿದ್ದು, ದಿನಾಂಕ **25.05.2023** ರಂದು ಮೌಖಿಕ ಪರೀಕ್ಷೆ ನಡೆಸಿ ವರದಿ ಮತ್ತು ಶಿಫಾರಸ್ಸುಗಳನ್ನು ಹಾಗೂ ವಿವಿಧ ಮೌಲ್ಯಮಾಪರುಗಳ ಕ್ರೋಢಿಕೃತ ವರದಿಯನ್ನು ಪರೀಕ್ಷಾ ವಿಭಾಗಕ್ಕೆ ಸಲ್ಲಿಸಿ ಡಿ.ಲಿಟ್ ಪದವಿಗೆ ಶಿಫಾರಸ್ಸು ಮಾಡಿರುತ್ತಾರೆ. ಹಾಗಾಗಿ **Dr B. Jagadesha** ಇವರಿಗೆ ತಾತ್ಕಾಲಿಕ ಡಿ.ಲಿಟ್. ಪದವಿ ಘೋಷಿಸಿ ಅಧಿಸೂಚನೆ ಹೊರಡಿಸುವ ಸಂಬಂಧ **ದಿನಾಂಕ:28.06.2023 ರಂದು ನಡೆಯುವ ಮೂರನೇ ವಿಶೇಷ ಸಿಂಡಿಕೇಟ್ ಸಭೆಯ** ಅನುಮೋದನೆಗಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022–23:. ವಿ.ಸಿಂ:03 ಪ.ವಿ. 05 ದಿ.:28.06.2023 |
|---|---|

ವಿಷಯ: **Dr. SOUMENDRA NATH BANDYOPADHYAY. ಇವರಿಗೆ ತಾತ್ಕಾಲಿಕ ಡಿ.ಲಿಟ್. ಪದವಿ ಘೋಷಿಸಿ ಅಧಿಸೂಚನೆ ಹೊರಡಿಸುವ ಕುರಿತು**

*****

**Dr. SOUMENDRA NATH BANDYOPADHYAY** ಇವರು ತುಮಕೂರು ವಿಶ್ವವಿದ್ಯಾನಿಲಯದಿಂದ ಡಿ.ಲಿಟ್ ಪದವಿ ಪಡೆಯುವ ಸಂಬಂಧ **"Patient Satisfaction as an Exponent of Service Quality & Sustainable Development In Health Care Sector-Management Analysis"** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಸಲ್ಲಿಸಿದ್ದು, ಸದರಿ ಮಹಾಪ್ರಬಂಧವನ್ನು ಈ ಕೆಳಕಂಡ ಐದು ವಿಷಯ ತಜ್ಞರುಗಳಿಂದ ಮೌಲ್ಯಮಾಪನ ಮಾಡಿಸಲಾಗಿರುತ್ತದೆ.

1. Prof. Badiuddin Ahmad Professor, Department of Management Studies Maulana Azad National Urdu University Gachibowli Hyderabad- **500 032,** Andra Pradesh Mob No. +91-9848423435.
2. **ಪ್ರೊ. ಹಿರೇಮಣಿ ನಾಯಕ್, ಪ್ರಾಧ್ಯಾಪಕರು ವ್ಯವಹಾರ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ-577 451, ಮೊಬೈಲ್ ಸಂಖ್ಯೆ: 94483 29269**
3. **ಪ್ರೊ. ರಮೇಶ್ ಕುಲಕರ್ಣಿ, ಪ್ರಾಧ್ಯಾಪಕರು, ವ್ಯವಹಾರ ಅಧ್ಯಯನ ವಿಭಾಗ, ಕೌಸಲಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-580 003**
4. **ಡಾ. ಎಸ್.ಸಿ. ಪಾಟೀಲ್, ಕುಲಸಚಿವರು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ, ಜ್ಞಾನ ಸಾಗರ ಆವರಣ ಬಳ್ಳಾರಿ-583 105 ಮೊಬೈಲ್ ಸಂಖ್ಯೆ: 94487 45392**
5. Prof. Kamran Sultan Professor, Department of Management Studies, Pandit Jawaharlal Nehru Institute of Business Management, Vikram University, Ujjain, Madhya Pradesh- 456 006 Mob No. 9425012255 / 9302222225

ಮೇಲ್ಕಂಡ ಮೌಲ್ಯಮಾಪಕರುಗಳಲ್ಲಿ ಮೌಖಿಕ ಪರೀಕ್ಷೆ ನಡೆಸಲು **Prof. R. Hiremani Naik** ಇವರನ್ನು ಸಂಯೋಜಕರನ್ನಾಗಿ ಮತ್ತು **Dr. Ramesh R. Kulkarni,** ಹಾಗೂ **Dr. S.C Patil** ಇವರುಗಳನ್ನು ಸದಸ್ಯರುಗಳನ್ನಾಗಿ ಮಾನ್ಯ ಕುಲಪತಿಯವರು ನೇಮಿಸಿದ್ದು, ದಿನಾಂಕ **16.06.2023** ರಂದು ಮೌಖಿಕ ಪರೀಕ್ಷೆ ನಡೆಸಿ ವರದಿ ಮತ್ತು ಶಿಫಾರಸ್ಸುಗಳನ್ನು ಹಾಗೂ ವಿವಿಧ ಮೌಲ್ಯಮಾಪರುಗಳ ಕ್ರೋಢಿಕೃತ ವರದಿಯನ್ನು ಪರೀಕ್ಷಾ ವಿಭಾಗಕ್ಕೆ ಸಲ್ಲಿಸಿ ಡಿ.ಲಿಟ್ ಪದವಿಗೆ ಶಿಫಾರಸ್ಸು ಮಾಡಿರುತ್ತಾರೆ. ಹಾಗಾಗಿ **Dr. SOUMENDRA NATH BANDYOPADHYAY** ಇವರಿಗೆ ತಾತ್ಕಾಲಿಕ ಡಿ.ಲಿಟ್. ಪದವಿ ಘೋಷಿಸಿ ಅಧಿಸೂಚನೆ ಹೊರಡಿಸುವ ಸಂಬಂಧ **ದಿನಾಂಕ:28.06.2023 ರಂದು ನಡೆಯುವ ಮೂರನೇ ವಿಶೇಷ ಸಿಂಡಿಕೇಟ್ ಸಭೆಯ** ಅನುಮೋದನೆಗಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022-23:ವಿ.ಸಿಂ-03:ಪ.ವಿ.-06 ದಿನಾಂಕ:28.06.2023 |
|---|---|

ವಿಷಯ : ತುಮಕೂರು ವಿಶ್ವವಿದ್ಯಾನಿಲಯದ ಹದಿನಾರನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡುವ ಕುರಿತು.

ಉಲ್ಲೇಖ : 1) ಕರ್ನಾಟಕ ರಾಜ್ಯಪಾಲರ ಸಚಿವಾಲಯದ ಪತ್ರ ಸಂಖ್ಯೆ: ಜಿಎಸ್ 02 ಜಿಯುಎಂ 2016 ದಿನಾಂಕ:18.02.2016

2) ಸರ್ಕಾರದ ಪತ್ರ ಸಂಖ್ಯೆ: ಇಡಿ 398 ಯುಆರ್‌ಸಿ 2014 (3) ದಿನಾಂಕ:14.10.2014

* * *

ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡುವ ಸಂಬಂಧ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 69 ರಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ.

1. ಸಿಂಡಿಕೇಟ್‌ನ ಮೂರನೇ ಎರಡರಷ್ಟಕ್ಕೆ ಕಡಿಮೆ ಇಲ್ಲದ ಸದಸ್ಯರು, ಯಾವೊಬ್ಬ ವ್ಯಕ್ತಿಗೆ, ಅವನ ಶ್ರೇಷ್ಠ ಸಾಧನೆ ಮತ್ತು ಸ್ಥಾನಮಾನದ ಕಾರಣದಿಂದಾಗಿ ಅವರ ಅಭಿಪ್ರಾಯದಲ್ಲಿ, ಅಂತ ಗೌರವ ಪದವಿ ಅಥವಾ ಇತರೆ ವಿದ್ಯಾವಿಷಯಕ ಪ್ರಶಸ್ತಿಯನ್ನು ಸ್ವೀಕರಿಸಲು ಯೋಗ್ಯ ಮತ್ತು ಸರಿಯಾದ ವ್ಯಕ್ತಿ ಎಂಬ ಆಧಾರದ ಮೇಲೆ ಗೌರವ ಪದವಿ ಅಥವಾ ವಿದ್ಯಾವಿಷಯಕ ಪ್ರಶಸ್ತಿಯನ್ನು ಪ್ರದಾನ ಮಾಡಬೇಕೆಂದು ಶಿಫಾರಸ್ಸು ಮಾಡಿದರೆ, ಸಿಂಡಿಕೇಟ್, ಸಂಬಂಧಪಟ್ಟ ವ್ಯಕ್ತಿಗೆ ಅದನ್ನು ಪ್ರದಾನ ಮಾಡಲು ಕುಲಾಧಿಪತಿಯವರ ಅನುಮೋದನೆಗಾಗಿ ಶಿಫಾರಸ್ಸು ಮಾಡಬಹುದು.
2. ಗೌರವ ಪದವಿಯನ್ನು ಅಥವಾ ಪ್ರಶಸ್ತಿಯನ್ನು ವಿಶೇಷ ಸಂದರ್ಭಗಳಲ್ಲಿ ಮಾತ್ರ ಪ್ರದಾನ ಮಾಡತಕ್ಕದ್ದು, ಅದನ್ನು ಕೇವಲ ಒಂದು ವಾಡಿಕೆ ಕ್ರಮವಾಗಿ ಪ್ರದಾನ ಮಾಡತಕ್ಕದ್ದಲ್ಲ. ಸಾಹಿತ್ಯ, ತತ್ವಜ್ಞಾನ, ಕಲೆ, ಸಂಗೀತ, ವರ್ಣ ಚಿತ್ರಕಲೆ ಅಥವಾ ಕಲೆ, ವಿಜ್ಞಾನ ಅಥವಾ ತಂತ್ರಜ್ಞಾನದ ವ್ಯಾಸಂಗ ವಿಭಾಗಗಳಿಗೆ ವಹಿಸಿಕೊಡಲಾಗಿರುವ ಯಾವುದೇ ಇತರೆ ವಿಷಯದಲ್ಲಿ ಮುನ್ನಡೆಗಾಗಿ ಗಣನೀಯ ಕೊಡುಗೆ ನೀಡಿದ ಅಥವಾ ಶಿಕ್ಷಣದ ಧ್ಯೇಯಗಳಿಗಾಗಿ ವಿಶಿಷ್ಟ ಸೇವೆ ಸಲ್ಲಿಸಿದ ವ್ಯಕ್ತಿಗಳನ್ನು ಅಂಥ ಗೌರವ ಪದವಿಗಳ ನೀಡಿಕೆಯ ಉದ್ದೇಶಕ್ಕಾಗಿ ಗುರುತಿಸತಕ್ಕದ್ದು.
3. ವಿಜ್ಞಾನ ಮತ್ತು ತಂತ್ರಜ್ಞಾನ ಶಾಖೆಗಳ, ವೈಜ್ಞಾನಿಕ ಮತ್ತು ತಂತ್ರಜ್ಞಾನ ಸಂಸ್ಥೆಗಳಲ್ಲಿ ಯೋಜನೆ, ಸಂಘಟನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಶಾಖೆಗಳಲ್ಲಿನ ಅಂಥ ವ್ಯಕ್ತಿಗಳಿಗೆ ಡಾಕ್ಟರ್ ಆಫ್ ಸೈನ್ಸ್ (ಡಿಎಸ್‌ಸಿ) ಪದವಿಯನ್ನು ಹಾನರಿಸ್ ಕಾಸಾ (ಗೌರವ ಪದವಿ) ಆಗಿ ಪ್ರದಾನ ಮಾಡಬಹುದು.
4. ಪ್ರತಿಷ್ಠಿತ ನ್ಯಾಯವಾದಿಗಳು, ನ್ಯಾಯಾಧೀಶರು, ಜ್ಯೂರಿಗಳು, ರಾಜಕೀಯ ಗಣ್ಯವ್ಯಕ್ತಿಗಳಿಗೆ ಅಥವಾ ಸಾರ್ವಜನಿಕ ಕ್ಷೇತ್ರದ ಧ್ಯೇಯಗಳಿಗಾಗಿ ಗಮನಾರ್ಹ ಕೊಡುಗೆ ನೀಡಿದ ವ್ಯಕ್ತಿಗಳಿಗೆ ಡಾಕ್ಟರ್ ಆಫ್ ಲಾಜ್ (ಎಲ್‌ಎಲ್‌ಡಿ) ಪದವಿಯನ್ನು ಹಾನರೀಸ್ ಕಾಸ್ (ಗೌರವ ಪದವಿ) ಆಗಿ ಪ್ರದಾನ ಮಾಡಬಹುದು.

ಮುಂದುವರೆದು, ವಿಶ್ವವಿದ್ಯಾನಿಲಯಗಳಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡುವ ಸಂಬಂಧ ಮೇಲ್ಕಂಡ ಉಲ್ಲೇಖ (01) ರಲ್ಲಿ ಘನತೆವೆತ್ತ ರಾಜ್ಯಪಾಲರ ಸಚಿವಾಲಯದಿಂದ ಅತ್ಯುತ್ತಮ ಶಿಕ್ಷಣ ತಜ್ಞರುಗಳಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡುವ ಬಗ್ಗೆ ಸೂಚನೆಗಳನ್ನು ನೀಡಿರುತ್ತಾರೆ.

1. The recommendation for the approval of the Chancellor for the conferment of the Honorary Degree shall be in conformity with Section 69 of the Karnataka State Universities Act, 2000.
2. The names before proposed must be properly considered and deliberated in the Syndicate.
3. After deliberation and consideration of such names in the Syndicate, the same shall be forwarded to the Scrutinizing Committee by the University.
4. The Chancellor may constitute expert scrutiny committee consisting of three members. One among the members of the Committee is the nominee of the University nominated from amongst the former Vice Chancellor, retired Secretaries of Govt. of Karnataka or Union of India.

(ಪು.ತಿ.ನೋ.)

5. The University may nominate its nominee to the Scrutinizing Committee well in advance.
6. The recommendations of the University for conferring Honorary Degree must be forwarded to the Scrutinizing Committee at least 45 days in advance to the date of Convocation.
7. The number of names proposed by the Scrutiny Committee to confer honorary degrees should not exceed more than three in a year.
8. The names proposed / recommended by the Syndicate of the University should be kept confidential and under no circumstances be disclosed to the recipient or to the press till the approval of the Chancellor is communicated.

ಮುಂದುವರೆದು, ವಿಶ್ವವಿದ್ಯಾನಿಲಯಗಳಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಪ್ರಕ್ರಿಯೆಯಲ್ಲಿ ಈ ಕೆಳಕಂಡ ಮಾನದಂಡಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಕರ್ನಾಟಕ ಸರ್ಕಾರವು ಉಲ್ಲೇಖಿತ ಪತ್ರ (02) ರಲ್ಲಿ ನಿರ್ದೇಶನವನ್ನು ನೀಡಿರುತ್ತದೆ.

1) ಪ್ರತಿ ವಿಶ್ವವಿದ್ಯಾನಿಲಯವು ನಿವೃತ್ತ ಕುಲಪತಿಗಳು / ನಿವೃತ್ತ ಸರ್ವೋಚ್ಛ ನ್ಯಾಯಾಲಯದ ನ್ಯಾಯಾಧೀಶರ/ ನಿವೃತ್ತ ಉಪ ನ್ಯಾಯಾಲಯದ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಒಂದು ಶಿಕ್ಷಣ ತಜ್ಞರ ಸಮಿತಿಯನ್ನು ರಚಿಸುವುದು.

2) ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದ ಕರಡು ಪಟ್ಟಿಯನ್ನು ಮೇಲೆ ಕಾಣಿಸಿದ ತಜ್ಞರ ಸಮಿತಿಯ ಮುಂದೆ ಮಂಡಿಸಿ ಅಂತಿಮ ಮೂರು ಜನಕ್ಕೆ ಸೀಮಿತ ಪಟ್ಟ ಪಟ್ಟಿಯನ್ನು ಪಡೆದು, ಸರ್ಕಾರಕ್ಕೆ ಸಲ್ಲಿಸುವುದು.

3) ಸರ್ಕಾರವು ಈ ಅಂತಿಮಗೊಂಡ ಪಟ್ಟಿಯನ್ನು ಕುಲಾಧಿಪತಿಗಳ ಅನುಮೋದನೆಗಾಗಿ ಸಲ್ಲಿಸುವುದು.

4) ಕುಲಾಧಿಪತಿಗಳ ಅಂತಿಮ ತೀರ್ಮಾನದಂತೆ ಗೌರವ ಡಾಕ್ಟರೇಟ್ ಪದವಿಗಳ ಪ್ರದಾನಕ್ಕೆ ಆಯಾ ವಿಶ್ವವಿದ್ಯಾನಿಲಯಗಳು ಸೂಕ್ತ ಕ್ರಮ ಕೈಗೊಳ್ಳುವುದು.

ಮೇಲ್ಕಂಡ ಅಂಶಗಳನ್ನು ಅವಗಾಹನೆಗೆ ತರುತ್ತಾ, ತುಮಕೂರು ವಿಶ್ವವಿದ್ಯಾನಿಲಯವು ಹದಿನಾರನೇ ವಾರ್ಷಿಕ ಘಟಿಕೋತ್ಸವವನ್ನು ದಿನಾಂಕ:27.07.2023 ರಿಂದ ದಿನಾಂಕ:04.08.2023 ರ ಒಳಗೆ ನಡೆಸಲು ಉದ್ದೇಶಿಸಿದ್ದು ಈ ಸಂಬಂಧ ಘಟಿಕೋತ್ಸವ ದಿನಾಂಕವನ್ನು ಮಾನ್ಯ ಕುಲಾಧಿಪತಿಗಳಿಂದ ನಿಗಧಿಗೊಳಿಸಲು ಹಾಗೂ ಹದಿನಾರನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡುವ ಸಂಬಂಧ ಒಬ್ಬ ನಿವೃತ್ತ ಕುಲಪತಿಗಳು / ನಿವೃತ್ತ ಸರ್ವೋಚ್ಛ ನ್ಯಾಯಾಲಯದ ನ್ಯಾಯಾಧೀಶರ/ ನಿವೃತ್ತ ಉಪ ನ್ಯಾಯಾಲಯದ ನ್ಯಾಯಾಧೀಶರನ್ನು ನಾಮನಿರ್ದೇಶನ ಮಾಡುವ ಕುರಿತು ಮೂರನೇ ವಿಶೇಷ ಸಿಂಡಿಕೇಟ್ ಸಭೆಯ ಮುಂದೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ: | 2022-23: ವಿ.ಸಿಂ: 03 : ಅ.ವಿ: 01 : ದಿನಾಂಕ:28-06-2023 |
|---|---|

**ವಿಷಯ: ತುಮಕೂರು ವಿಶ್ವವಿದ್ಯಾನಿಲಯವು Apollo Pharmacy, Magic Bus India Foundation, Spandana Bright Future Innovation, Teamlease Education Foundation & Nirmaan Organization ಈ ಸಂಸ್ಥೆಗಳೊಂದಿಗೆ ಒಡಂಬಡಿಕೆ (MOU) ಮಾಡಿಕೊಳ್ಳುವ ಕುರಿತು.**

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಕೌಶಲ್ಯಾಧಾರಿತ ಕ್ಷೇತ್ರದಲ್ಲಿ ಪರಿಣಿತಿ ಪಡೆದು ಉದ್ಯೋಗಾವಕಾಶ ಪಡೆಯುವ ನಿಟ್ಟಿನಲ್ಲಿ ಕೆಳಕಂಡ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಉದ್ದೇಶಿಸಿರುತ್ತದೆ.

**೦೫ ಸಂಸ್ಥೆ/ಕಂಪನಿಗಳ ವಿವರ**

01. Apollo Pharmacy, A Unit of Apollo Pharmacies Limited, No.13/2, 3rdFloor, IHX Building, Hosur Road, Singsasandra, Bangalore-560068
02. Magic Bus India Foundation, 3rd Floor, JK Textiles Building, Mehra Estate, Near Jaswanti landmark, LBS Marg, Vikroli(w) Mumbai-400079
03. Spandana BrightFuture Innovation, 1st Floor, Nandini complex, Next to old Taluk office, Devanahalli Town, Bangalore-562110
04. Teamlease Education Foundation, Salarpuria Acsent, Koramangala Industrial Layout, Jyotinivas College Road, Koramangala, Bangalore-560095
05. Nirmaan Organization, Manjunatha Complex, 41st Main, kanakapura Road, JP Nagar,1st Phase, Bangalore -560078

ಈ ಹಿನ್ನೆಲೆಯಲ್ಲಿ ಮೇಲ್ಕಂಡ ಸಂಸ್ಥೆಗಳೊಂದಿಗೆ ವಿಶ್ವವಿದ್ಯಾನಿಲಯವು ಒಡಂಬಡಿಕೆ (MOU) ಮಾಡಿಕೊಳ್ಳುವ ಸಂಬಂಧ ಕಾನೂನಾತ್ಮಕ ತೊಡಕು ಇಲ್ಲದಿರುವುದರಿಂದ ಹಾಗೂ ವಿಶ್ವವಿದ್ಯಾನಿಲಯ ಒಡಂಬಡಿಕೆ ನಿರ್ವಹಣೆ ಮತ್ತು ಪರಿಶೀಲನೆಯ ಸಂಯೋಜಕರು ಅಗತ್ಯ ಕ್ರಮವಹಿಸುವ ಬಗ್ಗೆ ಸದರಿ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ: | 2022-23: ವಿ.ಸಿಂ-03 : ಅವಿ-02 : ದಿನಾಂಕ: 28-06-2023 |
|---|---|

**ವಿಷಯ: ತುಮಕೂರು ವಿಶ್ವವಿದ್ಯಾನಿಲಯವು** Indian Yoga Association , Healthcare Sector Skill Council , Rooman Technologies Pvt Ltd & Finverse Upskilling Private Limited **ಈ ಸಂಸ್ಥೆಗಳೊಂದಿಗೆ ಒಡಂಬಡಿಕೆ (MOU) ಮಾಡಿಕೊಳ್ಳುವ ಬಗ್ಗೆ**

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಕೌಶಲ್ಯಾಧಾರಿತ ಕ್ಷೇತ್ರದಲ್ಲಿ ಪರಿಣಿತಿ ಪಡೆದು ಉದ್ಯೋಗಾವಕಾಶ ಪಡೆಯುವ ನಿಟ್ಟಿನಲ್ಲಿ ಕೆಳಕಂಡ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಉದ್ದೇಶಿಸಿರುತ್ತದೆ.

04 ಸಂಸ್ಥೆ/ಕಂಪನಿಗಳ ವಿವರ

1) Indian Yoga Association is a registered Society, Registered under the Society Registration Act of 1860 bearing Registration No:SI/63761/2008, Dated 31-10-2008 with its office at 4$^{th}$ Floor, Plot No.38, Pocket B-3, Sector-17, Dwaraka-78, New Delhi through its Karnataka State KASSC,IYA:-The Karnataka Chapter of Indian Yogo Association is proposing to start the Yoga Volunteer Certification for Students, Teachers and Staff of Tumkur University. The course fee is Rs.600/- (Rs 100/- will be paid to TU per students)

2) Healthcare Sector Skill Council (HSSC), a nonprofit organization registered under the Societies Registration Act, 1860, with its Office at 520-521, DLF Tower-A, Jasola District Center, New Delhi- 110025, acting through Mr. Ashish Jain, Chief Executive Officer, Healthcare Sector Skill Council :-HSSC through its Education & Skill Development initiatives will work closely with its training and Industry Partners to develop the industry specific program (NSQF or Non NSQF) and related learning resources with an aim to facilitate hand s-on experience and learning to make students skilled ready workforce.

3) Rooman Technologies Pvt Ltd, having Its Registered Office at #30, 12$^{th}$ Cross, Ist Stage, Rajajinagar, Near Navrang Theatre, Bangalore -560010 represented by its Managing Director Manish Kumar:- Design the skill development Training programs which cater to the needs of both industry as well as trainees allowing to train candidates as per skill set requirements of industry and providing trainees with an industry environment aligned with the market demand and latest technology.

4) Finverse Upskilling Private Limited, 20, Vishnu Towers, ITI Layout, JP Nagar Ist Phase, Bangalore 560 078 represented by its Director Pavan Sharma:-Provide colleges & students access to its app "Finverse", together with 5 free course credits using which students can upskill themselves. Conduct in person training sessions to upskill students of colleges affiliated to University.

ಈ ಹಿನ್ನೆಲೆಯಲ್ಲಿ ಮೇಲ್ಕಂಡ ಸಂಸ್ಥೆಗಳೊಂದಿಗೆ ವಿಶ್ವವಿದ್ಯಾನಿಲಯವು ಒಡಂಬಡಿಕೆ (MOU) ಮಾಡಿಕೊಳ್ಳುವ ಸಂಬಂಧ ಕಾನೂನಾತ್ಮಕ ತೊಡಕು ಇಲ್ಲದಿರುವುದರಿಂದ ಹಾಗೂ ವಿಶ್ವವಿದ್ಯಾನಿಲಯ ಒಡಂಬಡಿಕೆ ನಿರ್ವಹಣೆ ಮತ್ತು ಪರಿಶೀಲನೆಯ ಸಂಯೋಜಕರು ಅಗತ್ಯ ಕ್ರಮವಹಿಸುವ ಬಗ್ಗೆ ಸದರಿ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022–23/ವಿ.ಸಿಂ–03:ಸಾ&ಅ–03/28.06.2023 |
|---|---|

**ವಿಷಯ: ತುಮಕೂರು ವಿಶ್ವವಿದ್ಯಾನಿಲಯವು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಗೆ ಬ್ಯಾಂಕ್ ಶಾಖೆ ಹಾಗೂ ಎ.ಟಿ.ಎಂ. ಕಟ್ಟಡಗಳ ಸ್ಥಳಾವಕಾಶಕ್ಕಾಗಿ ನಿಗಧಿಪಡಿಸಿರುವ ಬಾಡಿಗೆ ಮೊತ್ತವನ್ನು ಕಡಿಮೆಗೊಳಿಸುವಂತೆ ಕೋರಿರುವ ಕುರಿತು.**

* * * * *

ತುಮಕೂರು ವಿಶ್ವವಿದ್ಯಾನಿಲಯವು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಗೆ ನೀಡಿರುವ ಬ್ಯಾಂಕ್ ಶಾಖೆ ಹಾಗೂ ಎ.ಟಿ.ಎಂ. ಸ್ಥಳಾವಕಾಶದ (**ಬ್ಯಾಂಕ್ ಶಾಖೆ ರೂ. 28,500/–** + ಎ.ಟಿ.ಎಂ. ರೂ. **2,780/–** + GST (18%) **ರೂ. 5,630/– ಸೇರಿದಂತೆ ಒಟ್ಟಾರೆ ರೂ. 36,910/–**) ಬಾಡಿಗೆ ಕರಾರು **ದಿನಾಂಕ:14.02.2022 ಕ್ಕೆ ಕೊನೆಗೊಂಡ ಹಿನ್ನಲೆಯಲ್ಲಿ** ಶಾಖೆಯ ವ್ಯವಸ್ಥಾಪಕರು ದಿನಾಂಕ:29.12.2021 ರಂದು ಮನವಿ ಸಲ್ಲಿಸಿ ಬಾಡಿಗೆ ಕರಾರರನ್ನು ನವೀಕರಿಸುವಂತೆ ಕೋರಿದ ಮೇರೆಗೆ ವಿಷಯವನ್ನು ದಿನಾಂಕ:28.01.2022 ರಂದು ನಡೆದ ಸಿಂಡಿಕೇಟ್ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿ, ಸಭೆಯು ಕೆಳಕಂಡಂತೆ ನಿರ್ಣಯಿಸಿರುತ್ತದೆ.

> **"ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ತುಮಕೂರು ವಿಶ್ವವಿದ್ಯಾನಿಲಯ ಶಾಖೆ ಮತ್ತು ಎಂ.ಟಿ.ಎಂ. ಸ್ಥಳಾವಕಾಶಕ್ಕಾಗಿ ಮಾಡಿಕೊಳ್ಳಲಾದ ಕರಾರನ್ನು ನವೀಕರಿಸುವ ಸಂಬಂಧ ಚರ್ಚಿಸಿದ ಸಭೆಯು ಕರಾರನ್ನು ದಿನಾಂಕ 15.02.2022 ರಿಂದ ಮುಂದಿನ 05 ವರ್ಷಗಳ ಅವಧಿಗೆ ನವೀಕರಿಸುವಂತೆ ನಿರ್ಣಯಿಸಿ ಲೋಕೋಪಯೋಗಿ ಇಲಾಖೆಯ ಹೊಸ ದರಗಳ ನಿಯಮದಂತೆ ಬಾಡಿಗೆ ನಿಗದಿಪಡಿಸುವಂತೆ ಸಿಂಡಿಕೇಟ್ ಸಭೆಯು ಅನುಮೋದಿಸಿತು".**

ಸಿಂಡಿಕೇಟ್ ಸಭಾ ನಿರ್ಣಯದಂತೆ ತುಮಕೂರು ವಿಶ್ವವಿದ್ಯಾನಿಲಯವು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಕ್ಕೆ ಬ್ಯಾಂಕ್ ಶಾಖೆ ಹಾಗೂ ಎಂ.ಟಿ.ಎಂ. ಸ್ಥಳಾವಕಾಶಗಳಿಗೆ ಒದಗಿಸಲಾದ ಕಟ್ಟಡಗಳಿಗೆ ನಿಯಮಾನುಸಾರ ಬಾಡಿಗೆ ಮೊತ್ತವನ್ನು ನಿಗದಿಪಡಿಸುವಂತೆ ಕೋರಿ ಲೋಕೋಪಯೋಗಿ ಇಲಾಖೆಗೆ ದಿನಾಂಕ:01.02.2022 ರಂದು ಪತ್ರ ಬರೆಯಲಾಗಿತ್ತು. ಈ ಸಂಬಂಧ ಲೋಕೋಪಯೋಗಿ ಇಲಾಖೆಯು ದಿನಾಂಕ:04.01.2023 ರ ಪತ್ರದಲ್ಲಿ **ಬ್ಯಾಂಕ್ ಶಾಖೆ ಕಟ್ಟಡಕ್ಕೆ ರೂ. 36,400/– ಹಾಗೂ ಎ.ಟಿ.ಎಂ. ಕಟ್ಟಡಕ್ಕೆ ರೂ. 6,400/–** ಗಳನ್ನು ನಿಗದಿಪಡಿಸಿರುತ್ತದೆ.

ಲೋಕೋಪಯೋಗಿ ಇಲಾಖೆ ಪತ್ರದ ನಿರ್ದೇಶನದಂತೆ **ಒಟ್ಟಾರೆ ಬಾಡಿಗೆ ಮೊತ್ತ ರೂ. 42,800/– ಹಾಗೂ ಜಿ.ಎಸ್.ಟಿ. ಮೊತ್ತ ರೂ. 7,704/– ರೂ. ಸೇರಿದಂತೆ ಒಟ್ಟಾರೆ ಮಾಹೆಯಾನ ರೂ. 50,504/–** ಗಳ ಬಾಡಿಗೆ ಮೊತ್ತವನ್ನು ದಿನಾಂಕ:15.02.2022 ರಿಂದ ಅನ್ವಯವಾಗುವಂತೆ ಪಾವತಿಸಲು ಹಾಗೂ ಬಾಡಿಗೆ ಕರಾರನ್ನು ನವೀಕರಿಸುವಂತೆ ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ತುಮಕೂರು ವಿಶ್ವವಿದ್ಯಾನಿಲಯ ಶಾಖೆ, ಇವರಿಗೆ ದಿನಾಂಕ:16.02.2023 ರ ಪತ್ರದಲ್ಲಿ ತಿಳಿಸಲಾಗಿತ್ತು.

ಶಾಖೆಯ ವ್ಯವಸ್ಥಾಪಕರು ದಿನಾಂಕ:15.03.2023 ರಂದು ಮನವಿ ಸಲ್ಲಿಸಿ "ಲೋಕೋಪಯೋಗಿ ಇಲಾಖೆಯು ನಿಗದಿಪಡಿಸಿರುವಂತೆ ಬ್ಯಾಂಕ್ ಶಾಖೆ ಹಾಗೂ ಎ.ಟಿ.ಎಂ. ಸ್ಥಳವಕಾಶಕ್ಕಾಗಿ ನಿಗದಿಪಡಿಸಲಾದ ಮಾಹೆಯಾನ ಬಾಡಿಗೆ ಮೊತ್ತ ರೂ. 42,500/– + ಜಿ.ಎಸ್.ಟಿ. ಮೊತ್ತವು ಹಿಂದಿನ ಬಾಡಿಗೆ ಮೊತ್ತಕ್ಕಿಂತ (ರೂ. 31,280 + ಜಿ.ಎಸ್.ಟಿ.) ಶೇ. 36.82% ರಷ್ಟು ಅಧಿಕವಾಗಿರುತ್ತದೆ. ಆದುದರಿಂದ ಬ್ಯಾಂಕ್ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿರುವ ಸೇವೆಯನ್ನು ಪರಿಗಣಿಸಿ ಹಿಂದಿನ ಬಾಡಿಗೆ ಮೊತ್ತಕ್ಕೆ ಶೇ. 20 % ರೊಳಗೆ ಬಾಡಿಗೆ ಮೊತ್ತವನ್ನು ಹೆಚ್ಚಿಸುವಂತೆ" ಕೋರಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖಾ ವ್ಯವಸ್ಥಾಪಕರು ಬ್ಯಾಂಕ್ ಶಾಖೆ ಹಾಗೂ ಎ.ಟಿ.ಎಂ. ಸ್ಥಳವಕಾಶದ ಕಟ್ಟಡಗಳಿಗೆ ಲೋಕೋಪಯೋಗಿ ಇಲಾಖೆಯು ನಿಗದಿಪಡಿಸಿರುವ (ಬ್ಯಾಂಕ್ ಶಾಖೆ ಕಟ್ಟಡಕ್ಕೆ ರೂ. 36,400/– ಹಾಗೂ ಎ.ಟಿ.ಎಂ. ಕಟ್ಟಡಕ್ಕೆ ರೂ. 6,400/– + ಜಿ.ಎಸ್.ಟಿ. ಮೊತ್ತ ರೂ. 7,704/–) ಮೊತ್ತದಲ್ಲಿ ಹಿಂದಿನ ಬಾಡಿಗೆ ಮೊತ್ತಕ್ಕೆ ಶೇ. 20 % ರೊಳಗೆ ಬಾಡಿಗೆ ಮೊತ್ತವನ್ನು ಹೆಚ್ಚಿಸುವಂತೆ ಕೋರಿ ಸಲ್ಲಿಸಿರುವ ಮನವಿಯನ್ನು ಸಿಂಡಿಕೇಟ್ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022-23.: ವಿ.ಸಿ೦:03 :ಖ.ಕೋಶ- 01 : ದಿನಾಂಕ: 28.06.2023 |
|---|---|

**ವಿಷಯ:** **ತುಮಕೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳು ಹಾಗೂ ಆಡಳಿತ ಕಛೇರಿಯ ವಿಭಾಗಗಳಿಗೆ ಕಂಪ್ಯೂಟರ್ ಪ್ರಿಂಟರ್ ಹಾಗೂ ಇನ್ನಿತರೆ ಎಲೆಕ್ಟ್ರಾನಿಕ್ಸ್ ಪರಿಕರಗಳನ್ನು ಸರಬರಾಜು ಮಾಡಿರುವ ಮೆ. ವಿಜಯ್ ಎಂಟರ್‌ಪ್ರೈಸಸ್, ತುಮಕೂರು ಇವರಿಗೆ ಹುಂಡಿಯ ಮೊತ್ತ ರೂ. 35,02,300.00/- (ರೂಪಾಯಿ ಮೂವತ್ತೈದು ಲಕ್ಷದ ಎರಡು ಸಾವಿರದ ಮೂರುನೂರು ಮಾತ್ರ) ಗಳನ್ನು ಪಾವತಿಸಲು ಸಿಂಡಿಕೇಟ್ ಸಭೆಯ ಅನುಮೋದನೆ ಕುರಿತು.**

ಉಲ್ಲೇಖ:
1. 21 ನೇ ಖರೀದಿ ಸಮಿತಿ ನಿರ್ಣಯ ದಿನಾಂಕ: 24.08.2022.
2. ಕರ್ನಾಟಕ ಪಾರದರ್ಶಕತೆ ಅಧಿನಿಯಮ 1999 & 2000.
3. ವಿಶ್ವವಿದ್ಯಾನಿಲಯದ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಿದ ಅಲ್ಪಾವಧಿ ಮರು ಟೆಂಡರ್ ಅಧಿಸೂಚನೆ ಸಂಖ್ಯೆ: No.TUT/Gen/CP/ICT/PC/2022-23/3277/Call-2 dated:15.11.2022.
4. ತಾಂತ್ರಿಕ ಮತ್ತು ಆರ್ಥಿಕ ಬಿಡ್ಡಿನ ಸಭಾ ನಡಾವಳಿ ದಿನಾಂಕ: 02.01.2023.
5. ದರಸಂಧಾನ ಸಭೆಯ ನಡಾವಳಿಯ ದಿನಾಂಕ: 03.01.2023.
6. ಮಾದರಿಗಳ ಪರಿಶೀಲನಾ ವರದಿ ದಿನಾಂಕ: 04.01.2023.
7. ಕರಾರು ಒಪ್ಪಂದ ದಿನಾಂಕ: 21.03.2023.
8. ವಿಶ್ವವಿದ್ಯಾನಿಲಯದ ಸರಬರಾಜು ಆದೇಶ ಸಂಖ್ಯೆ: ತುವಿತು/ಸಾಮಾನ್ಯ/CP/ICT/2022-23/ಖ.ಕೋ/6295(A) ದಿನಾಂಕ: 21.03.2023.
9. 3ನೇ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯ ದಿನಾಂಕ: 17.05.2023.
10. ಮೆ. ವಿಜಯ್ ಎಂಟರ್‌ಪ್ರೈಸಸ್. ತುಮಕೂರು ಇವರ ಮನವಿ ಪತ್ರ ದಿನಾಂಕ: 28.04.2023.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳು ಹಾಗೂ ಆಡಳಿತ ಕಛೇರಿಯ ವಿಭಾಗಗಳಿಗೆ ಕಂಪ್ಯೂಟರ್ ಪ್ರಿಂಟರ್ ಹಾಗೂ ಇನ್ನಿತರೆ ಎಲೆಕ್ಟ್ರಾನಿಕ್ಸ್ ಪರಿಕರಗಳನ್ನು ಸರಬರಾಜು ಪಡೆಯಲು, ಉಲ್ಲೇಖ (01) ರ 21 ನೇ ಖರೀದಿ ಸಮಿತಿ ಸಭೆಯಲ್ಲಿ ನಿರ್ಣಯಿಸಿದಂತೆ, ಉಲ್ಲೇಖ (02)ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 & 2000 ನಿಯಮಗಳನ್ವಯ ಉಲ್ಲೇಖ (03) ರಲ್ಲಿ ಏಕ ಲಕೋಟೆ ಪದ್ಧತಿಯಲ್ಲಿ ಎರಡನೇ ಕರೆಯಾಗಿ ಅಲ್ಪಾವಧಿ ಇ-ಟೆಂಡರ್ ಆಹ್ವಾನಿಸಿಸಲಾಗಿತ್ತು ಅದರಂತೆ, ಬಿಡ್ಡುದಾರರಾದ ಅರ್ಜಿಯನ್ನು ವಿಶ್ವವಿದ್ಯಾನಿಲಯವು ಅಂಗೀಕರಿಸಿ, ಉಲ್ಲೇಖ (04)ರ ನಡಾವಳಿಯಂತೆ ಉಲ್ಲೇಖ (05) ರಲ್ಲಿನ ದರಸಂಧಾನದಂತೆ ಉಲ್ಲೇಖ (06) ರ ಮಾದರಿಗಳ ಪರಿಶೀಲನೆ ಮಾಡಿದ ತರುವಾಯ ಉಲ್ಲೇಖ (07) ರಲ್ಲಿ ಕರಾರು ಒಪ್ಪಂದ ಕೈಗೊಳ್ಳಲಾಗಿರುತ್ತದೆ.

ಸದರಿ ಕರಾರಿನನ್ವಯ, ವಿವಿಧ ಸ್ನಾತಕೋತ್ತರ ವಿಭಾಗಗಳು ಹಾಗೂ ಆಡಳಿತ ಕಛೇರಿಯ ವಿಭಾಗಗಳಿಗೆ ಕಂಪ್ಯೂಟರ್ ಪ್ರಿಂಟರ್ ಹಾಗೂ ಇನ್ನಿತರೆ ಎಲೆಕ್ಟ್ರಾನಿಕ್ಸ್ ಪರಿಕರಗಳನ್ನು ಎಲ್ಲಾ ತೆರಿಗೆ/ಸೇವೆ ಸೇರಿದಂತೆ **ಒಟ್ಟು ಮೊತ್ತ ರೂ. 35,02,300.00 (ರೂಪಾಯಿ ಮೂವತ್ತೈದು ಲಕ್ಷದ ಎರಡು ಸಾವಿರದ ಮೂರುನೂರು ಮಾತ್ರ)** ಗಳ ಸಾಮಗ್ರಿಗಳನ್ನು ಷರತ್ತುಗಳಿಗೊಳಪಟ್ಟು ಉಲ್ಲೇಖ (08) ರಲ್ಲಿ ಸರಬರಾಜು ಮಾಡಲು ಆದೇಶಿಸಲಾಗಿತ್ತು. ಉಲ್ಲೇಖ (09) ರಲ್ಲಿ ಸದರಿ ವಿಷಯವನ್ನು ದಿನಾಂಕ: 17.05.2023 ರಂದು ಜರುಗಿದ 3ನೇ ಸಾಮಾನ್ಯ ಸಿಂಡಿಕೇಟ್ ಸಭೆಗೆ ಖರೀದಿ ಪ್ರಕ್ರಿಯೆ ಕೈಗೊಂಡಿರುವ ಕ್ರಮವನ್ನು ಸ್ಥಿರೀಕರಣಕ್ಕೆ ಕಾರ್ಯಸೂಚಿಯನ್ನು ಮಂಡಿಸಲಾಗಿತ್ತು. ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**ಪು.ತಿ.ನೋ**

ಮಂದುವರೆದಂತೆ, ಸದರಿ ಸರಬರಾಜು ಆದೇಶದನ್ವಯ ಸಂಸ್ಥೆಯವರು ತುಮಕೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳು ಹಾಗೂ ಆಡಳಿತ ಕಛೇರಿಯ ವಿಭಾಗಗಳಿಗೆ ಕಂಪ್ಯೂಟರ್ ಪ್ರಿಂಟರ್ ಹಾಗೂ ಇನ್ನಿತರೆ ಎಲೆಕ್ಟ್ರಾನಿಕ್ಸ್ ಪರಿಕರಗಳನ್ನು ಸರಬರಾಜು ಮಾಡಿ ಉಲ್ಲೇಖ (10) ರಲ್ಲಿ ಮೂಲ ಹುಂಡಿ, ಡೆಲಿವರಿ ಚಲನ್ ಮತ್ತು ಪೂರಕ ದಾಖಲೆಗಳೊಂದಿಗೆ ಮಂಜೂರಾತಿಗಾಗಿ ಈ ಕೆಳಕಂಡ ಕೋಷ್ಟಕದಲ್ಲಿ ವಿವರಿಸಿರುವಂತೆ ಸಲ್ಲಿಸಿರುತ್ತಾರೆ.

| ಕ್ರ. ಸಂ | ಸರಬರಾಜು ಸಂಸ್ಥೆಯ ಹೆಸರು | ಹುಂಡಿಯ ಸಂಖ್ಯೆ ಮತ್ತು ದಿನಾಂಕ | ಮಂಜೂರಾತಿಯ ಒಟ್ಟು ಮೊತ್ತ (ತೆರಿಗೆ ಸೇರಿದಂತೆ) ರೂಗಳಲ್ಲಿ |
|---|---|---|---|
| 1 | ಮೆ. ವಿಜಯ್ ಎಂಟರ್‌ಪ್ರೈಸಸ್, ತುಮಕೂರು | ಸಂಖ್ಯೆ: VE016<br>ದಿನಾಂಕ: 28.04.2023 | 35,02,300.00 |
| **ಒಟ್ಟು ಮೊತ್ತ ರೂ. 35,02,300.00 (ರೂಪಾಯಿ ಮೂವತ್ತೈದು ಲಕ್ಷದ ಎರಡು ಸಾವಿರದ ಮೂರುನೂರು ಮಾತ್ರ)** | | | **35,02,300.00** |

ಮುಂದುವರೆದಂತೆ, ಪ್ರಸ್ತುತ ಸದರಿ ಸಂಸ್ಥೆಯವರು ಸರಬರಾಜು ಮಾಡಿ ಹುಂಡಿಯನ್ನು ಸಲ್ಲಿಸಿರುವ ಎಲೆಕ್ಟ್ರಾನಿಕ್ ಉಪಕರಣಗಳನ್ನು ವಿಶ್ವವಿದ್ಯಾನಿಲಯವು ನೀಡಿರುವ ಸರಬರಾಜು ಆದೇಶದಲ್ಲಿ ಸಂರಚನೆ/ಮಾದರಿಯನ್ನು ಪರಿಶೀಲಿಸಿ, ಅನುಷ್ಠಾನಗೊಳಿಸಿ ಉತ್ತಮ ಸ್ಥಿತಿಯನ್ನು ಗಮನಿಸಿದ ತರುವಾಯ ದಾಸ್ತಾನು ನಿರ್ವಹಿಸಿಕೊಂಡು ವಿಶ್ವವಿದ್ಯಾನಿಲಯದ ಸರಬರಾಜು ಆದೇಶದಲ್ಲಿರುವ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ನಿಯಮನುಸಾರ ಕ್ರಮವಹಿಸಿ ಸದರಿ ಹುಂಡಿಯ ಮೊತ್ತ **ರೂ. 35,02,300.00 (ರೂಪಾಯಿ ಮೂವತ್ತೈದು ಲಕ್ಷದ ಎರಡು ಸಾವಿರದ ಮೂರುನೂರು ಮಾತ್ರ)** ಗಳನ್ನು ಸದರಿ ಸಂಸ್ಥೆಯವರಿಗೆ ಪಾವತಿಸಲು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಕಾರ್ಯಸೂಚಿಯನ್ನು ಮಂಡಿಸಲಾಗಿದೆ.

| ವಿಷಯ ಸಂಖ್ಯೆ | 2022-23.: ವಿ.ಸಿಂ:03 :ಖ.ಕೋಶ- 02 : ದಿನಾಂಕ: 28.06.2023 |
|---|---|

**ವಿಷಯ:** ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳಿಗೆ ಅಗತ್ಯವಿರುವ ಎಲೆಕ್ಟ್ರಾನಿಕ್ ಪೋಡಿಯಂ ಗಳನ್ನು ಸರಬರಾಜು ಪಡೆಯುವ ಸಂಬಂಧ ಕೈಗೊಳ್ಳಲಾದ ಟೆಂಡರ್ ಪ್ರಕ್ರಿಯೆಗೆ ಸಿಂಡಿಕೇಟ್ ಅನುಮೋದನೆ ಕೋರಿ.

**ಉಲ್ಲೇಖ:**
1. 22 ನೇ ಖರೀದಿ ಸಮಿತಿ ಸಭಾ ನಿರ್ಣಯ ದಿನಾಂಕ: 13.10.2022.
2. ಟೆಂಡರ್ ಅಧಿಸೂಚನೆ ಸಂಖ್ಯೆ: No.TUT/Gen/EP/PG/2022-23/PC/4435 dated: 14.12.2022.
3. ಟೆಂಡರ್ ಮೌಲ್ಯಮಾಪನ ಸಮಿತಿಯ ಸಭಾ ನಡಾವಳಿಗಳ ದಿನಾಂಕ: 24.05.2023.
4. ಮಾದರಿ ಹಾಗೂ ದರಸಂಧಾನ ಸಭೆಯ ನಡಾವಳಿಗಳ ದಿನಾಂಕ: 26.05.2023

*****

ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳಿಗೆ ಅಗತ್ಯವಿರುವ ಎಲೆಕ್ಟ್ರಾನಿಕ್ ಪೋಡಿಯಂಗಳನ್ನು ಸರಬರಾಜು ಪಡೆಯಲು "Tender for the Supply of Electronic Podium to Various PG Department's, Tumkur University, Tumakuru" ಟೆಂಡರಿನ ಸಂಬಂಧ ದಿನಾಂಕ: 13.10.2022 ರಲ್ಲಿ ನಡೆದ 22ನೇ ಖರೀದಿ ಸಮಿತಿಗೆ ವಿಷಯವನ್ನು ಮಂಡಿಸಲಾಯಿತು. ಸದರಿ ಖರೀದಿ ಸಮಿತಿಯಲ್ಲಿ ನಿಯಮಾನುಸಾರ ಇ–ಟೆಂಡರ್ ಮುಖಾಂತರ ಕ್ರಮವಹಿಸಲು ನಿರ್ಣಯಿಸಲಾಗಿದ್ದು, ಉಲ್ಲೇಖ (01)ರ ಸಭಾ ನಿರ್ಣಯದನ್ವಯ ಉಲ್ಲೇಖ (02) ರಲ್ಲಿ ಕೆ.ಟಿ.ಪಿ.ಪಿ ನಿಯಮ 2000 ರ ಅನುಸಾರ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದಿನಾಂಕ: 14.12.2022 ರಂದು ವಿಶ್ವವಿದ್ಯಾನಿಲಯದಿಂದ ಟೆಂಡರ್ ಆಹ್ವಾನಿಸಲಾಗಿತ್ತು. ಉಲ್ಲೇಖ (03) ರಲ್ಲಿನ ಟೆಂಡರ್ ಮೌಲ್ಯಮಾಪನ ಸಮಿತಿಯ ಸದಸ್ಯರನ್ನು ದಿನಾಂಕ: 24.05.2023 ರಂದು ನಡೆಸಿದ ಟೆಂಡರ್ ಮೌಲ್ಯಮಾಪನ ಸಮಿತಿ ಸಭೆಗೆ ಆಹ್ವಾನಿಸಲಾಗಿತ್ತು. ಸದರಿ ಮೌಲ್ಯಮಾಪನ ಸಮಿತಿಯು 03 ಸಂಸ್ಥೆಯವರು ಸಲ್ಲಿಸಿರುವ ತಾಂತ್ರಿಕ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ್ದು, ಸದರಿ ದಾಖಲೆಗಳಲ್ಲಿ 01 ಸಂಸ್ಥೆಯ ದಾಖಲೆಗಳು ಸಮರ್ಪಕವಾಗಿಲ್ಲದ ಕಾರಣ ಸದರಿ ಅರ್ಜಿಯನ್ನು ತಿರಸ್ಕರಿಸಿ ಇನ್ನುಳಿದ ಈ ಕೆಳಕಂಡ 02 ಸಂಸ್ಥೆಗಳು ಸಲ್ಲಿಸಿರುವ ದಾಖಲೆಗಳು ಸಮರ್ಪಕವಾಗಿರುವ ಹಿನ್ನೆಲೆಯಲ್ಲಿ ಎರಡೂ ಸಂಸ್ಥೆಗಳ ಆರ್ಥಿಕ ಬಿಡ್ಡುಗಳನ್ನು ಪರಿಗಣಿಸಲು ನಿರ್ಣಯಿಸಲಾಯಿತು.

1. MADHUGIRI SHIVAPRASAD RENU (SAHYADRI TELECOM)
2. S ANIL KUMAR (Divine Technical Solutions)

ಎರಡು ಸಂಸ್ಥೆಗಳ ತುಲನಾತ್ಮಕ ಪಟ್ಟಿಯನ್ನು ಪರಿಶೀಲಿಸಿದ ತರುವಾಯ, ಎರಡೂ ಸಂಸ್ಥೆಗಳ ಪ್ರತಿನಿಧಿಗಳನ್ನು ದಿನಾಂಕ: 26.05.2023 ರಂದು Electronic Podium Demo ನೀಡಲು ವಿಶ್ವವಿದ್ಯಾನಿಲಯಕ್ಕೆ ಆಹ್ವಾನಿಸಿ ಸದರಿ ಎರಡೂ ಸಂಸ್ಥೆಗಳ Electronic Podium ಮಾದರಿಗಳನ್ನು ಪ್ರಸ್ತುತಪಡಿಸಿದ (Demo) ತರುವಾಯ **M/s. MADHUGIRI SHIVAPRASAD RENU (SAHYADRI TELECOM)** ಸಂಸ್ಥೆಯವರ ಉಪಕರಣದ ತಾಂತ್ರಿಕತೆ ಹಾಗೂ ಗುಣಮಟ್ಟವು ತೃಪ್ತಿದಾಯವಾಗಿರುವ ಹಿನ್ನೆಲೆಯಲ್ಲಿ ಸದರಿ ಸಂಸ್ಥೆಯವರೊಂದಿಗೆ ದರಸಂಧಾನ ಕೈಗೊಂಡು ಪ್ರತಿ ಇ–ಪೋಡಿಯಂನೊಂದಿಗೆ ಹೆಚ್ಚುವರಿಯಾಗಿ ಒಂದು ಕಾಲರ್‌ಮೈಕ್ ನೀಡುವಂತೆ ಒಪ್ಪಿಸಿ ಎಲ್ಲಾ ತೆರಿಗೆ/ಸೇವೆ ಸೇರಿದಂತೆ ರೂ. 42,500/– ಗಳಿಗೆ Electronic Podium ಗಳನ್ನು ಟೆಂಡರ್ ಮೌಲ್ಯದ ಮೊತ್ತದ ಮಿತಿಗೊಳಪಟ್ಟು ದರಕರಾರು ಒಪ್ಪಂದ ಮಾಡಿಕೊಂಡು ಸರಬರಾಜು ಪಡೆಯಲು ಸಮಿತಿಯು ನಿರ್ಣಯಿಸಿತು.

ಈ ಮೇಲ್ಕಂಡ ವಿಷಯವನ್ನು ಸಭೆಯ ಅವಗಾಹನೆಗೆ ತರುತ್ತಾ ಸದರಿ ಟೆಂಡರ್ ಪ್ರಕ್ರಿಯೆ ಮತ್ತು ತಾಂತ್ರಿಕ/ ಆರ್ಥಿಕ ಮತ್ತು ದರಸಂಧಾನದ ಸಭಾ ನಡಾವಳಿಗಳ ಅನುಮೋದನೆಗಾಗಿ ಸಿಂಡಿಕೇಟ್ ಸಭೆಗೆ ಮಂಡಿಸಿದೆ.

| ವಿಷಯ ಸಂಖ್ಯೆ: | 2022–23: ವಿ.ಸಿಂ.3 :ಇಂವಿ:01 ದಿನಾಂಕ: 28.06.2023 |
|---|---|

**ವಿಷಯ: ಶ್ರೀ ಎನ್.ವಿ ರಾಮಮೂರ್ತಿ, ಮುಖ್ಯಸ್ಥರು, TEKNA-KON ಸಂಸ್ಥೆ, ತುಮಕೂರು ರವರ ಮನವಿಯ ಕುರಿತು.**

*****

ಶ್ರೀ ಎನ್.ವಿ ರಾಮಮೂರ್ತಿ, ಮುಖ್ಯಸ್ಥರು, TEKNA-KON ಸಂಸ್ಥೆ, ತುಮಕೂರು ರವರು ದಿನಾಂಕ:07.02.2023 ರಂದು ಪತ್ರವನ್ನು ಬರೆದು, ನಮ್ಮ ಸಂಸ್ಥೆಯು ಆರ್ಕಿಟೆಕ್ಚರ್, ಸಿವಿಲ್ ಇಂಜಿನಿಯರಿಂಗ್, ಆಸ್ತಿ ಮೌಲ್ಯೀಕರಣ, ಯೋಜನಾ ನಿರ್ವಹಣಾ ಸಮಾಲೋಚಕರಾಗಿ ವಿವಿಧ ಸಮಾಲೋಚನಾ ಸೇವೆಯನ್ನು ನೀಡುವಲ್ಲಿ ಪ್ರಸಿದ್ಧಿಯನ್ನು ಹೊಂದಿರುತ್ತವೆ. ನಮ್ಮ ಸಂಸ್ಥೆಯು ತಾಂತ್ರಿಕ ಸಲಹಾ ಸೇವೆಯಲ್ಲಿ 1985 ರಿಂದ ಯಾವುದೇ ತಾರತಮ್ಯವಿಲ್ಲದೇ ಯಶಸ್ವಿ ತಾಂತ್ರಿಕ ಸಲಹಾ ಸೇವೆಯನ್ನು ಸರ್ಕಾರಿ, ಖಾಸಗಿ ಕ್ಷೇತ್ರಗಳಲ್ಲಿ ಎಂಪ್ಯಾನೆಲ್ ಮೂಲಕ ಉತ್ತಮ ಸೇವೆಯನ್ನು ನೀಡುತ್ತಿದೆ. ನಾನು ಆದಾಯ ತೆರಿಗೆಯ ಮೌಲ್ಯ ನಿರ್ಣಯಗಾರನಾಗಿಯೂ ಕಾರ್ಯ ನಿರ್ವಹಿಸಿರುತ್ತೇನೆ.

ಮೇಲ್ಕಂಡ ಎಲ್ಲಾ ಕ್ಷೇತ್ರಗಳಲ್ಲಿಯೂ ಉತ್ತಮ ತಾಂತ್ರಿಕ ಸಲಹಾ ಸೇವೆ ಮತ್ತು ತಾಂತ್ರಿಕ ಯೋಜನೆಗಳಲ್ಲಿನ ಉತ್ತಮ ಸೇವೆಯನ್ನು ಸಲ್ಲಿಸಿರುವ ಹಿನ್ನೆಲೆಯಲ್ಲಿ ನನ್ನನ್ನು ತಮ್ಮ ವಿಶ್ವವಿದ್ಯಾನಿಲಯದ ಇಂಜಿಯರ್‌ಗಳ ಎಂಪ್ಯಾನೆಲ್ ಪಟ್ಟಿಗೆ ಸೇರಿಸಿಕೊಳ್ಳಬೇಕೆಂದು ಕೋರಿರುತ್ತಾರೆ.

ಸದರಿಯವರ ಮನವಿಯನ್ನು ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022-23/ವಿ.ಸಿಂ-03:ಸಿಬ್ಬಂದಿ-01 ದಿನಾಂಕ:28.06.2023 |
|---|---|

**ವಿಷಯ: ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಂಗಾಮಿ ಸಂಚಿತ ವೇತನ ನೌಕರರಿಗೆ ಮಧ್ಯಂತರ ಪರಿಹಾರ ವಿಸ್ತರಿಸುವಂತೆ ಮನವಿ ಸಲ್ಲಿಸಿರುವ ಕುರಿತು.**

*****

ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಹಂಗಾಮಿ ಸಂಚಿತ ವೇತನದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ದಿನಾಂಕ:26.04.2023 ರಂದು ಮನವಿ ಸಲ್ಲಿಸಿ, ಸುಮಾರು 15-20 ವರ್ಷಗಳಿಂದ ನಾವುಗಳು ಸಂಚಿತ ವೇತನ ನೌಕರರಾಗಿ ವಿವಿಧ ವಿಭಾಗಗಳಲ್ಲಿ, ವಿವಿಧ ಹುದ್ದೆಗಳಲ್ಲಿ ಒಟ್ಟು 67 ಜನ ಕಾರ್ಯನಿರ್ವಹಿಸುತ್ತಿದ್ದೇವೆ. ಸರ್ಕಾರದ ಆದೇಶದಂತೆ ಆಯಾ ಕಾಲ-ಕಾಲಕ್ಕೆ ವೇತನ ಪರಿಷ್ಕರಣೆಯನುಸಾರ ಅನ್ವಯವಾಗುವ ಮೂಲ ವೇತನಕ್ಕೆ ರೂ.10.00 ಕಡಿತಗೊಳಿಸಿ ಮೂಲವೇತನ ಹಾಗೂ ಕಾಲ-ಕಾಲಕ್ಕೆ ಖಾಯಂ ನೌಕರರಿಗೆ ಅನ್ವಯಿಸುವ ತುಟ್ಟಿಭತ್ಯೆಯಲ್ಲಿ 75% ಮತ್ತು ಮನೆ ಬಾಡಿಗೆ ಭತ್ಯೆಯಲ್ಲಿ 75% ಪಾವತಿಸಲಾಗುತ್ತಿದೆ.

ಕರ್ನಾಟಕ ಸರ್ಕಾರವು 07 ನೇ ವೇತನ ಆಯೋಗದ ವೇತನ ಪರಿಷ್ಕರಣೆ ಅಂತಿಮ ವರದಿಯನ್ನು ಕಾಯ್ದಿರಿಸಿ ರಾಜ್ಯ ಸರ್ಕಾರಿ ನೌಕರರಿಗೆ ಹಾಗೂ ನಿವೃತ್ತ ನೌಕರರಿಗೆ ಮೂಲ ವೇತನಕ್ಕೆ 17% ಮಧ್ಯಂತರ ಪರಿಹಾರ ಮಂಜೂರಾತಿ ನೀಡಲಾಗಿರುತ್ತದೆ. ಅದರಂತೆ ನಮಗೂ ಸಹ ಸದರಿ 17% ಮಧ್ಯಂತರ ಪರಿಹಾರ ನೀಡಲು ಕೋರಿರುತ್ತಾರೆ.

ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಸರ್ಕಾರದಿಂದ ಮಂಜೂರಾದ ಹುದ್ದೆಗೆದುರಾಗಿ ಕಾರ್ಯನಿರ್ವಹಿಸುತ್ತಿರುವ ಹಂಗಾಮಿ ಸಂಚಿತ ವೇತನ ನೌಕರರಿಗೆ ಈ ಹಿಂದೆ ಆರನೇ ವೇತನ ಆಯೋಗದ ವರದಿಯನ್ನು ವಿಸ್ತರಿಸುವ ಸಂದರ್ಭದಲ್ಲಿ ಈ ಕೆಳಗಿನಂತೆ ಕ್ರಮಕೈಗೊಳ್ಳಲಾಗಿದೆ.

- ಸರ್ಕಾರವು ಆರನೇ ವೇತನ ಆಯೋಗ ರಚಿಸಿದ ಸಂದರ್ಭದಲ್ಲಿ ಮಧ್ಯಂತರ ಪರಿಹಾರವನ್ನು ನೀಡಿರುವುದಿಲ್ಲ.
- ಸರ್ಕಾರವು ದಿನಾಂಕ:01.04.2018ರಿಂದ ಅನ್ವಯವಾಗುಂತೆ ಆರ್ಥಿಕ ಸೌಲಭ್ಯವನ್ನು ಪೂರ್ಣ ಪ್ರಮಾಣದಲ್ಲಿ ಮಂಜೂರು ಮಾಡಿ ಆರನೇ ವೇತನವನ್ನು ಅನುಷ್ಠಾನಗೊಳಿಸಿ ಆದೇಶಿಸಿರುತ್ತದೆ.
- ತುಮಕೂರು ವಿಶ್ವವಿದ್ಯಾನಿಲಯಕ್ಕೆ ಮಂಜೂರಾದ ಬೋಧಕೇತರ ಹುದ್ದೆಗಳಿಗೆದುರಾಗಿ ಕಾರ್ಯನಿರ್ವಹಿಸುತ್ತಿರುವ ಹಂಗಾಮಿ ಸಂಚಿತ ವೇತನ ನೌಕರರಿಗೆ ಸದರಿ ಆರನೇ ವೇತನವನ್ನು ವಿಸ್ತರಿಸುವುದರ ಸಂಬಂಧ ಅನುಮತಿ ಕೋರಿ ದಿನಾಂಕ:18.06.2019 ರಲ್ಲಿ ಸರ್ಕಾರದ ನಿರ್ದೇಶನವನ್ನು ಕೋರಲಾಗಿತ್ತು.
- ಸದರಿ ಪತ್ರಕ್ಕೆದುರಾಗಿ ದಿನಾಂಕ:18.06.2019ರಲ್ಲಿ ಸರ್ಕಾರದ ಪತ್ರದಲ್ಲಿ **"ಮಂಜೂರಾದ ಹುದ್ದೆಗಳ ಎದುರಿಗೆ ಕಾರ್ಯನಿರ್ವಹಿಸುತ್ತಿರುವವರಿಗೆ ಮಾತ್ರ ಕರ್ನಾಟಕ ನಾಗರೀಕ ಸೇವೆಗಳು(ಪರಿಷ್ಕೃತ ವೇತನ) ನಿಯಮಗಳು-2018ರನುಸಾರ ಸಂವಾದಿ ಪರಿಷ್ಕೃತ ವೇತನ ಶ್ರೇಣಿಯ ಕನಿಷ್ಠ ವೇತನ ಹಂತವನ್ನು ರೂ.10/-ಗಳನ್ನು ಕಡಿತಗೊಳಿಸಿ ನಿಗದಿಪಡಿಸಲಾಗಿರುವ ವೇತನಕ್ಕೆ ಅನ್ವಯವಾಗುವ ತುಟ್ಟಿಭತ್ಯೆಯ ಹಾಗೂ ಮನೆ ಬಾಡಿಗೆಭತ್ಯೆಯ ತಲಾ ಶೇ 75% ರಷ್ಟನ್ನು ಮನೆ ಬಾಡಿಗೆ ಭತ್ಯೆ ಪಾವತಿಸಲು ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಭವಿಷ್ಯವರ್ತಿಯಾಗಿ ಅನ್ವಯವಾಗುವಂತೆ ಪಾವತಿಸುವ ಕುರಿತು ವಿಶ್ವವಿದ್ಯಾಲಯದ ಹಂತದಲ್ಲೇ ನಿಯಮಾನುಸಾರ ಕ್ರಮವಹಿಸುವಂತೆ ನಿರ್ದೇಶಿಸಿರುತ್ತಾರೆ"**.

(ಪು.ತಿ.ನೋ)

- ಈ ಸಂಬಂಧ ಸದರಿ ನಿರ್ದೇಶನವನ್ನು ದಿನಾಂಕ:20.07.2019 ರಂದು ನಡೆದ ಸಿಂಡಿಕೇಟ್ ಸಭೆಗೆ ಮಂಡಿಸಲಾಗಿ ಸದರಿ ಸಭೆಯು ಈ ಕೆಳಕಂಡಂತೆ ನಿರ್ಣಯಿಸಿರುತ್ತದೆ.

**"ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಹಂಗಾಮಿ ಸಂಚಿತ ವೇತನದಡಿಯಲ್ಲಿ ಕಾರ್ಯ- ನಿರ್ವಹಿಸುತ್ತಿರುವ ನೌಕರರಿಗೆ ಮಂಜೂರಾದ ಹುದ್ದೆಗಳ ಎದುರಿಗೆ ಕಾರ್ಯನಿರ್ವಹಿಸುತ್ತಿರು-ವವರಿಗೆ ಮಾತ್ರ ಕರ್ನಾಟಕ ನಾಗರೀಕ ಸೇವೆಗಳು (ಪರಿಷ್ಕೃತ ವೇತನ) ನಿಯಮಗಳು-2018 ಅನುಸಾರ ಸಂವಾದಿ ಪರಿಷ್ಕೃತ ವೇತನ ಶ್ರೇಣಿಯ ಕನಿಷ್ಠ ವೇತನ ಹಂತವನ್ನು ರೂ. 10/- ಗಳನ್ನು ಕಡಿತಗೊಳಿಸಿ ನಿಗದಿಪಡಿಸಲಾಗಿರುವ ವೇತನಕ್ಕೆ ಅನ್ವಯವಾಗುವ ತುಟ್ಟಿಭತ್ಯೆಯ ಹಾಗೂ ಮನೆ ಬಾಡಿಗೆ ಭತ್ಯೆಯ ತಲಾ ಶೇ.75 ರಷ್ಟನ್ನು ಮನೆ ಬಾಡಿಗೆ ಭತ್ಯೆ ಪಾವತಿಯ ಷರತ್ತು ಮತ್ತು ನಿಬಂದನೆಗಳಿಗೆ ಒಳಪಟ್ಟು ಆಗಸ್ಟ್-2019 ಮಾಹೆಯಿಂದ ಸದರಿ ಭತ್ಯೆಗಳನ್ನು ನೀಡಲು ಸಿಂಡಿಕೇಟ್ ಸಭೆಯು ಒಪ್ಪಿತು".**

- ದಿನಾಂಕ:20.09.2019ರ ಕಚೇರಿ ಆದೇಶದಲ್ಲಿ ಸದರಿ ಹಂಗಾಮಿ ಸಂಚಿತ ನೌಕರರಿಗೆ ಖಾಯಂ ಬೋಧಕೇತರ ಸಿಬ್ಬಂದಿಗಳಿಗೆ ಹುದ್ದೆವಾರು ನಿಗದಿಯಾಗಿರುವ ಮೂಲ ವೇತನಕ್ಕೆ ರೂ.10/-ಗಳನ್ನು ಕಡಿತಗೊಳಿಸಿ ಸದರಿ ವೇತನಕ್ಕೆ ಅನ್ವಯವಾಗುವಂತೆ ವಿಶ್ವವಿದ್ಯಾನಿಲಯವು ವಿಧಿಸಬಹುದಾದ ಷರತ್ತಿಗೊಳಪಟ್ಟು ತುಟ್ಟಿಭತ್ಯೆಯ ಹಾಗೂ ಮನೆಬಾಡಿಗೆ ಭತ್ಯೆಯ ತಲಾ ಶೇ.75 ರಷ್ಟನ್ನು ಭತ್ಯೆಗಳನ್ನು ಮಂಜೂರು ಮಾಡಿ ಆದೇಶಿಸಲಾಗಿರುತ್ತದೆ.

ಪ್ರಸ್ತುತ ಸರ್ಕಾರವು ಏಳನೇ ವೇತನ ಆಯೋಗದ ಅಂತಿಮ ವರದಿಯನ್ನು ಕಾಯ್ದಿರಿಸಿ, ಮಧ್ಯಂತರ ಪರಿಹಾರವನ್ನು ಮಂಜೂರು ಮಾಡಿರುತ್ತದೆ.

- **ಸರ್ಕಾರದ ಆದೇಶ ಸಂಖ್ಯೆ: ಆಇ 07 ಎಸ್‌ಆರ್‌ಪಿ 2023 ದಿನಾಂಕ:01.03.2023 ರಲ್ಲಿ** 2018ರ ಪರಿಷ್ಕೃತ ಆದೇಶದಲ್ಲಿ ವೇತನ ಪಡೆಯುತ್ತಿರುವ ರಾಜ್ಯ ಸರ್ಕಾರಿ ನೌಕರರುಗಳಿಗೆ 01 ಏಪ್ರಿಲ್ 2023 ರಿಂದ ಜಾರಿಗೆ ಬರುವಂತೆ ಮೂಲ ವೇತನದ ಶೇಕಡಾ 17 ರಷ್ಟು ಮಧ್ಯಂತರ ಪರಿಹಾರವನ್ನು ಮಂಜೂರು ಮಾಡಿರುತ್ತದೆ.

**ಸದರಿ ಆದೇಶದ ಕ್ರಮ ಸಂಖ್ಯೆ 03, 05 ಮತ್ತು 06ರಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಲಾಗಿರುತ್ತದೆ.**

3. ಮೂಲ ವೇತನಕ್ಕೆ ಮೇಲೆ ಸೂಚಿಸಿರುವುದನ್ನು ಹೊರತುಪಡಿಸಿ ಇತರೆ ಯಾವುದೇ ಉಪಲಬ್ಧಗಳನ್ನು ಸೇರಿಸತಕ್ಕದ್ದಲ್ಲ.

5. **ಸರ್ಕಾರದ ಸ್ಥಳೀಯ ಸಂಸ್ಥೆಗಳ ನೌಕರರಿಗೆ ಹಾಗೂ ಸರ್ಕಾರದಿಂದ ಸಹಾಯಾನುದಾನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳಲ್ಲಿ ಕಾಲಿಕ ವೇತನ ಶ್ರೇಣಿಗಳಲ್ಲಿರುವ ಪೂರ್ಣಾವಧಿ ನೌಕರರುಗಳಿಗೆ ಈ ಆದೇಶವು ಅನ್ವಯಿಸುತ್ತದೆ.**

6. ಸ್ಥಳೀಯ ಸಂಸ್ಥೆಗಳ (ನಗರ ಸ್ಥಳೀಯ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯ) ನೌಕರರಿಗೆ ಸೌಲಭ್ಯವನ್ನು ಮಂಜೂರು ಮಾಡುವುದರಿಂದ ಉಂಟಾಗುವ ವೆಚ್ಚವನ್ನು ಅನ್ವಯಿಸುವ ಸ್ಥಳೀಯ ಸಂಸ್ಥಗಳೇ ಭರಿಸತಕ್ಕದ್ದು.

**ಸರ್ಕಾರಿ ಆದೇಶವನ್ನು ಹಾಗೂ ವಿಶ್ವವಿದ್ಯಾನಿಲಯದಲ್ಲಿ ಹಂಗಾಮಿ ಸಂಚಿತ ವೇತನದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಮನವಿಯನ್ನು ಸಿಂಡಿಕೇಟ್ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.**

| ವಿಷಯ ಸಂಖ್ಯೆ | 2022-23/ವಿ.ಸಿಂ.-03: ಸಿಬ್ಬಂದಿ-02 ದಿನಾಂಕ:28.06.2023 |
|---|---|

**ವಿಷಯ: ಶ್ರೀ ಬಸವರಾಜ್ ಪಿ.ಎಸ್., ದ್ವಿತೀಯ ದರ್ಜೆ ಸಹಾಯಕರು ಇವರು ಪದೋನ್ನತಿಯನ್ನು ನೀಡುವಂತೆ ಕೋರಿರುವ ಕುರಿತು.**

****

**ಶ್ರೀ ಬಸವರಾಜು ಪಿ.ಎಸ್. ಇವರ ನೇಮಕಾತಿ ಹಾಗೂ ಪದೋನ್ನತಿಗೆ ಸಂಬಂಧಿಸಿದಂತೆ ಕೆಳಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರಲಾಗಿದೆ.**

i. ದಿನಾಂಕ:11.01.2007 ರ ಸರ್ಕಾರದ ಪತ್ರದಲ್ಲಿನ ಸೂಚನೆಗಳಂತೆ ದಿನಾಂಕ:03.07.2007ರ ತುಮಕೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯ ನಿರ್ಣಯ ಹಾಗೂ ದಿನಾಂಕ:06.07.2009ರ ಕುವೆಂಪು ವಿಶ್ವವಿದ್ಯಾನಿಲಯದ ನಿರ್ಣಯದಂತೆ ಹುದ್ದೆ ರಹಿತವಾಗಿ ವರ್ಗಾವಣೆ ಮಾಡಲು ಅಭಿಪ್ರಾಯವನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

ii. ಎರಡೂ ವಿಶ್ವವಿದ್ಯಾನಿಲಯಗಳ ಅಭಿಪ್ರಾಯದಂತೆ ಸದರಿಯವರನ್ನು ಕುವೆಂಪು ವಿಶ್ವವಿದ್ಯಾನಿಲಯದ ಅಧಿಕೃತ ಜ್ಞಾಪನ ಸಂಖ್ಯೆ:ಕುವಿ:ಮಾಸನಿ-2:2010-11:632 ದಿನಾಂಕ:21.04.2010ರಲ್ಲಿ ಶ್ರೀ ಬಸವರಾಜ್ ಪಿ.ಎಸ್. ಇವರನ್ನು ಹುದ್ದೆ ರಹಿತವಾಗಿ ತುಮಕೂರು ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡಲಾಗಿರುತ್ತದೆ.

iii. ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತಗೊಂಡಿದ್ದ ಸದರಿಯವರ ಅಂತಿಮ ವೇತನ ಪ್ರಮಾಣ ಪತ್ರದಲ್ಲಿ ಎನ್.ಪಿ.ಎಸ್.ಗೆ ಸಂಬಂಧಿಸಿದಂತೆ ಯಾವುದೇ ಉಲ್ಲೇಖವಿರುವುದಿಲ್ಲ ಹಾಗೂ ಸದರಿಯವರ ಪಿಂಚಣಿ ವಂತಿಕೆಯನ್ನು ಇದುವರೆವಿಗೂ ತುಮಕೂರು ವಿಶ್ವವಿದ್ಯಾನಿಲಯಕ್ಕೆ ರವಾನಿಸಿರುವುದಿಲ್ಲ.

iv. ಸದರಿಯವರು ದಿನಾಂಕ 19.01.2006ರಲ್ಲಿ ಕುವೆಂಪು ವಿಶ್ವವಿದ್ಯಾನಿಲಯದ ಸೇವೆಯಲ್ಲಿ ವಿಲೀನಗೊಂಡಿದ್ದು, ಸರ್ಕಾರಿ ಆದೇಶ ಸಂಖ್ಯೆ: ಇಡಿ 04 ಯುಎಸ್‌ವಿ 2007 ದಿನಾಂಕ 28.12.2007ರಲ್ಲಿ **ದಿನಾಂಕ 16.01.2006ರ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಅನೂರ್ಜಿತಗೊಳಿಸಿ ಹೊರಡಿಸಲಾಗಿದ್ದು ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಇಡಿ 04 ಯುಎಸ್‌ವಿ 2007 ದಿನಾಂಕ 13.2.2008 ರಲ್ಲಿ ಹಿಂಪಡೆದಿದ್ದರೂ ಸಹ, ಶ್ರೀ ಬಸವರಾಜ್ ಪಿ.ಎಸ್. ಇವರನ್ನು ತುಮಕೂರು ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡಲಾದ ಕುವೆಂಪು ವಿಶ್ವವಿದ್ಯಾನಿಲಯದ ಅಧಿಕೃತ ಜ್ಞಾಪನ ಸಂಖ್ಯೆ: ಕುವಿ: ಮಾಸನಿ-2 : 2010-11 : 632 ದಿನಾಂಕ 21.04.2010 ದಲ್ಲಿ ಸದರಿಯವರ ನೇಮಕಾತಿಯನ್ನು ಸರ್ಕಾರವು ರದ್ದುಗೊಳಿಸಿರುತ್ತದೆ ಎಂದು ಮಾತ್ರ ತಿಳಿಸಿದ್ದು, ನೇಮಕಾತಿ ಸಕ್ರಮಾತಿಯ ಕುರಿತು ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಈ ಸಂಬಂಧ ಸರ್ಕಾರಕ್ಕೂ ಸಹಾ ಪತ್ರವನ್ನು ಬರೆಯಲಾಗಿದ್ದು, ಸರ್ಕಾರದಿಂದ ಯಾವುದೇ ಉತ್ತರ ಸ್ವೀಕೃತವಾಗಿರುವುದಿಲ್ಲ.**

v. ತುಮಕೂರು ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆಗೊಂಡು ದಿ:23.04.2010 ವರದಿ ಮಾಡಿಕೊಂಡು, 24.04.2010 ರಿಂದ 24.01.2018 (ದಿ:30.01.2018 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ)ರವರೆಗೆ ಸದರಿಯವರು ಉನ್ನತ ಶಿಕ್ಷಣ ಇಲಾಖೆಯಲ್ಲಿಯೇ ಅನ್ಯಕಾರ್ಯ ನಿಮಿತ್ತ ನಿಯೋಜನೆಗೊಂಡು ಕಾರ್ಯನಿರ್ವಹಿಸಿರುತ್ತಾರೆ.

vi. **ಸದರಿಯವರ ಪದೋನ್ನತಿಯ ಸಂಬಂಧ ದಿನಾಂಕ 06.05.2016ರಂದು ನಡೆದ ನೇಮಕಾತಿ ಮಂಡಳಿ ಸಭೆಯಲ್ಲಿ** "ಸದರಿಯವರು ಸಲ್ಲಿಸದೇ ಇರುವ 2010-11, 2012-13 ಮತ್ತು 2015-16ರ ಮೂರು ವರ್ಷಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಪಡೆಯಲು ಹಾಗೂ ವಿವಿ ಪರಿನಿಯಮಾವಳಿಗಳಲ್ಲಿ ಪದೋನ್ನತಿಯನ್ನು ನೀಡಲು ಅವಕಾಶ ಕಲ್ಪಿಸಿರುವ ಸಂಬಂಧ ಸೇವಾ ನಿಯಮಗಳ ತಜ್ಞರಿಂದ ಹಾಗೂ ಸರ್ಕಾರದಿಂದ ಸ್ಪಷ್ಟನೆಯನ್ನು ಪಡೆಯಲು ಶಿಫಾರಸ್ಸು ಮಾಡಿರುತ್ತದೆ."

vii. **ಅದರಂತೆ ದಿನಾಂಕ:13.09.2016ರಂದು ಶ್ರೀ ಪಿ. ರಾಮನಾಥ್, ವಕೀಲರು, ಇವರಿಂದ ಅಭಿಪ್ರಾಯವನ್ನು ಪಡೆಯಲಾಗಿದ್ದು, ಕೆಳಕಂಡಂತಿರುತ್ತದೆ.**

"The other possibility is that during the time allowed for passing the departmental examination under Tumkur University 2014 Statutes, employees who are otherwise eligible for promotion may be promoted without insisting upon passing the prescribed departmental examinations. This is because it is not legally permissible to insist upon passing the examination immediately on their prescribing and a reasonable time has to be allowed to acquire the prescribed qualification and such a time is allowed. Hence Sri PS Basavaraju may be considered for promotion prospectively under this provision also as an alternative".

(ಪು.ತಿ.ನೋ.)

viii. **ಸದರಿಯವರ ಪದೋನ್ನತಿಯ ಸಂಬಂಧ ದಿನಾಂಕ 01.12.2016ರಂದು ನಡೆದ ನೇಮಕಾತಿ ಮಂಡಳಿ ಸಭೆಯಲ್ಲಿ** ಶ್ರೀ ಬಸವರಾಜ ಪಿ.ಎಸ್. ರವರು ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಸಂಚಿತ ವೇತನ ನೌಕರ ಸೇವೆಯಿಂದ ದಿನಾಂಕ:19.01.2006 ರಂದು ದ್ವಿತೀಯ ದರ್ಜೆ ಸಹಾಯಕರ ಹುದ್ದೆಯಲ್ಲಿ ಖಾಯಂಗೊಂಡಿದ್ದು, 45 ವರ್ಷಗಳನ್ನು ಪೂರೈಸಿರುವುದರಿಂದ ದಿನಾಂಕ:15.11.2009 ರಿಂದ ಪೂರ್ವಾನ್ವಯವಾಗುವಂತೆ ಖಾಯಂಪೂರ್ವ ಸೇವಾವಧಿಯನ್ನು ತೃಪ್ತಿಕರವೆಂದು ಘೋಷಿಸಿದ್ದು, ನೇಮಕಾತಿ ದಿನಾಂಕದಿಂದ 05 ವರ್ಷಗಳ ಸೇವೆಯನ್ನು ದಿನಾಂಕ:19.01.2011 ಕ್ಕೆ ಪೂರ್ಣಗೊಳಿಸಿದ್ದು, ತುಮಕೂರು ವಿಶ್ವವಿದ್ಯಾನಿಲಯದ "Tumkur University Services and Kannada Language Examinations for Ministerial Staff - 2014 statute" ರ ಪ್ರಕರಣ 5 ರಲ್ಲಿ ಅವಕಾಶ ಕಲ್ಪಿಸಿರುವಂತೆ ದಿನಾಂಕ:19.01.2011 ರಿಂದ ಅನ್ವಯವಾಗುವಂತೆ ಶ್ರೀ ಬಸವರಾಜ ಪಿ.ಎಸ್., ದ್ವಿತೀಯ ದರ್ಜೆ ಸಹಾಯಕರು ಇವರಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 57 ರಡಿ ರಚಿತವಾದ ಆಯ್ಕೆ ಮಂಡಳಿಯು ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ (ವೇತನ ಶ್ರೇಣಿ ರೂ. 16000-400-17200-450-19000-500-21000-600-24600-700-28800-800-29600) ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 22 ಎಸ್‌ಬಿಸಿ 79, ದಿನಾಂಕ:30.08.1979 ರನ್ವಯ ರಾಜ್ಯ ಮೀಸಲಾತಿಗೆ ಮೀಸಲಿರಿಸಿರುವ 07 ಹುದ್ದೆಗಳಲ್ಲಿ ಕ್ರಮಸಂಖ್ಯೆ 03 (Unreserved) ರ ಹುದ್ದೆಗೆದುರಾಗಿ ಪದೋನ್ನತಿ ನೀಡಲು ಶಿಫಾರಸ್ಸು ಮಾಡಿರುತ್ತದೆ.

ix. **ಸದರಿ ಶಿಫಾರಸ್ಸನ್ನು ದಿನಾಂಕ 21.01.2017ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿ ಸದರಿಯವರು ಪ್ರಸ್ತುತ ಉನ್ನತ ಶಿಕ್ಷಣ ಇಲಾಖೆಯಲ್ಲಿ ಅನ್ಯಕಾರ್ಯ ನಿಮಿತ್ತ ಕಾರ್ಯನಿರ್ವಹಿಸುತ್ತಿದ್ದು, ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದು ಸದರಿಯವರ ಸೇವೆಯನ್ನು ಅನ್ಯಕಾರ್ಯ ನಿಮಿತ್ತದಿಂದ ಹಿಂಪಡೆದು ತು.ವಿ.ವಿ ಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಅನುವಾಗುವಂತೆ ಕ್ರಮವಹಿಸಲು ಸೂಚಿಸಿರುತ್ತದೆ, ಸದರಿಯವರ ಪದೋನ್ನತಿಯ ಸಂಬಂಧ ಯಾವುದೇ ನಿರ್ಣಯವನ್ನು ತೆಗೆದುಕೊಂಡಿರುವುದಿಲ್ಲ.**

x. ಶ್ರೀ ಬಸವರಾಜು ಪಿ.ಎಸ್. ಇವರನ್ನು ಅನ್ಯಕಾರ್ಯನಿಮಿತ್ತ ಸೇವೆಯಿಂದ ಬಿಡುಗಡೆಗೊಳಿಸುವಂತೆ ಕೋರಿ ದಿನಾಂಕ:09.02.2017 ರಂದು ಸರ್ಕಾರಕ್ಕೆ ಪತ್ರ ಬರೆಯಲಾಗಿ, ಸದರಿಯವರು ಅನ್ಯಕಾರ್ಯ ನಿಮಿತ್ತದಿಂದ ದಿನಾಂಕ: 24.01.2018 ರ ಸರ್ಕಾರದ ಅಧಿಕೃತ ಜ್ಞಾಪನದನ್ವಯ ಬಿಡುಗಡೆಗೊಂಡು 30.01.2018 ರಂದು ತುಮಕೂರು ವಿಶ್ವವಿದ್ಯಾನಿಲಯದ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ.

xi. ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ವೃಂದಗಳ ಅರ್ಹ ಬೋಧಕೇತರ ಸಿಬ್ಬಂದಿಗಳಿಗೆ ಪದೋನ್ನತಿ ನೀಡುವ ಸಂಬಂಧ ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದನೆಗೊಂಡ ಪರಿನಿಯಮಾವಳಿಯನ್ವಯ ಇಲಾಖಾ ಪರೀಕ್ಷೆಗಳನ್ನು ನಡೆಸಿ, ನಿಯಮಾನುಸಾರ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ಸಿಬ್ಬಂದಿಗಳಿಗೆ ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದನೆಗೊಂಡ "ತುಮಕೂರು ವಿಶ್ವವಿದ್ಯಾನಿಲಯದ ಬೋಧಕೇತರ ಹುದ್ದೆಗಳ ನೇಮಕಾತಿ ಹಾಗೂ ಪದೋನ್ನತಿಗಾಗಿ ರಚಿಸಲಾದ ವೃಂದ ಮತ್ತು ನೇಮಕಾತಿ ಪರಿನಿಯಮ" ದನ್ವಯ, ಜ್ಯೇಷ್ಠತೆಯನುಸಾರ ವಿಶ್ವವಿದ್ಯಾನಿಲಯದಲ್ಲಿ ಪದೋನ್ನತಿಗೆ ಮೀಸಲಾದ ಹುದ್ದೆಗಳಿಗೆದುರಾಗಿ ಪದೋನ್ನತಿ ನೀಡುವ ಸಂಬಂಧ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ-2000 ಪ್ರಕರಣ 57ರನ್ವಯ **ನೇಮಕಾತಿ ಮಂಡಳಿಯನ್ನು ರಚಿಸಿ ದಿನಾಂಕ:30.05.2020 ರಂದು ಸಭೆ ಕರೆಯಲಾಗಿತ್ತು. ಸದರಿ ನೇಮಕಾತಿ ಮಂಡಳಿ ಸಬೆಯಲ್ಲಿ ಶ್ರೀ ಬಸವರಾಜು ಪಿ.ಎಸ್, ದ್ವಿ.ದ.ಸ ಇವರು ಇಲಾಖಾ ಪರೀಕ್ಷೆಯನ್ನು ತೆಗೆದುಕೊಂಡಿಲ್ಲದಿರುವ ಪ್ರಯುಕ್ತ ಹಾಗೂ ಇಲಾಖಾ ಪರೀಕ್ಷೆ ತೇರ್ಗಡೆಯಾಗದೇ ಪದೋನ್ನತಿ ನೀಡಲು ಸಿ & ಆರ್ ನಿಯಮಾವಳಿಗಳ ಪ್ರಕಾರ ಅವಕಾಶವಿಲ್ಲದಿರುವುದರಿಂದ ಇವರನ್ನು ಪದೋನ್ನತಿಗೆ ಪರಿಗಣಿಸಿರುವುದಿಲ್ಲ.**

xii. **ವಿಶ್ವವಿದ್ಯಾನಿಲಯವು 2 ಬಾರಿ ಇಲಾಖಾ ಪರೀಕ್ಷೆಗಳನ್ನು ನಡೆಸಿದ್ದು, ಸದರಿಯವರು ಪದೋನ್ನತಿಗೆ ಅವಶ್ಯವಿರುವ ಇಲಾಖಾ ಪರೀಕ್ಷೆಗಳನ್ನು ತೆಗೆದುಕೊಂಡಿರುವುದಿಲ್ಲ.**

xiii. ತುಮಕೂರು ವಿಶ್ವವಿದ್ಯಾನಿಲಯದ ಅರ್ಹ ಬೋಧಕೇತರ ಸಿಬ್ಬಂದಿಗೆ ಕನ್ನಡ ಭಾಷಾ ಹಾಗೂ ಇಲಾಖಾ ಪರೀಕ್ಷೆಗಳನ್ನು ನಡೆಸುವ ಸಲುವಾಗಿ ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದನೆಗೊಂಡ ಪರಿನಿಯಮಾವಳಿಯಲ್ಲಿ ಕೆಳಕಂಡಂತೆ ಉಲ್ಲೇಖಿಸಲಾಗಿದೆ.

**5. Restriction on Promotion:** No University employee shall be eligible for promotion to any higher post unless he has passed Kannada Language Examinations and prescribed Service Examinations, if any, for the post already held by him and such higher post in accordance with the provision of Section 3.

(ಪು.ತಿ.ನೋ)

Provided this shall not be applicable for promotion from Group 'D' posts. However, such of those employees who were promoted from Group 'D' posts shall pass the required examinations within a period of three years from the date of promotion.
Provided also that for the purpose of eligibility to promotion, no service examination shall be and shall ever be deemed to have been prescribed for University employee whose promotion is due or falls on the date, on or before the commencement of these Statutes and such employee shall be eligible for promotion from the date of eligibility, retrospectively.

**6. Savings**

2) A University employee who has completed 45 years of age is exempted from passing service and Kannada Language Examinations, such exemption is only from drawing of increments and confirmation in the post held by an employee but not for promotion to the higher grades.
3) A University employee claiming an exemption from passing any examination may make an application in duplicate in Form I for a certificate of exemption to the Registrar, Tumkur University, Tumkur and the said authority on being satisfied that the applicant has passed the said examination issues a certificate in Form II. Necessary entries of the exemption are to be made in the service records of the employee.

**xiv.** ಆದರೆ ಶ್ರೀ ಬಸವರಾಜು ಪಿ.ಎಸ್. ಇವರು ತಮ್ಮ ಮನವಿಯಲ್ಲಿ ದಿನಾಂಕ:04.04.2015 ರಲ್ಲಿ ಸರ್ಕಾರದಿಂದ ಅನುಮೋದನೆಗೊಂಡ ವಿಶ್ವವಿದ್ಯಾನಿಲಯದ **"Tumkur University Service and Kannada Language Examination for Ministerial Staff – 2014"** ಪರಿನಿಯಮದಲ್ಲಿನ ಪ್ರಕರಣ 5 ರಲ್ಲಿ **"Provided also that for the purpose of eligibility to promotion, no service examination shall be and shall ever be deemed to have been prescribed for University employee whose promotion is due or falls on the date, on or before the commencement of these Statutes and such employee shall be eligible for promotion from the date of eligibility, retrospectively."** ಎಂದಿರುವುದನ್ನು ಪರಿಗಣಿಸಬೇಕೆಂದು ಕೋರಿರುತ್ತಾರೆ.

**xv.** ಶ್ರೀ ಬಸವರಾಜು ಪಿ.ಎಸ್., ದ್ವಿತೀಯ ದರ್ಜೆ ಸಹಾಯಕರು ಇವರಿಗೆ ಪದೋನ್ನತಿ ನೀಡುವ ಬಗ್ಗೆ ದಿನಾಂಕ:25.08.2020 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿ, ಶ್ರೀ ಬಸವರಾಜು ಪಿ.ಎಸ್., ದ್ವಿತೀಯ ದರ್ಜೆ ಸಹಾಯಕರು ಇವರಿಗೆ ಪದೋನ್ನತಿ ನೀಡುವ ಕುರಿತು, ಶ್ರೀ ಪ್ರಸನ್ನಕುಮಾರ್ ರವರ ಅಧ್ಯಕ್ಷತೆಯಲ್ಲಿ ಪ್ರೊ. ಪಿ. ಪರಮಶಿವಯ್ಯ, ಶ್ರೀ ವಿನಯ್ ಟಿ.ಡಿ. ಮತ್ತು ಡಾ. ಬಾಲಪ್ಪ ಸದಸ್ಯರುಗಳನ್ನೊಳಗೊಂಡಂತೆ ಸಮಿತಿಯನ್ನು ರಚಿಸಿ, ಸದರಿಯವರಿಗೆ ಪದೋನ್ನತಿ ನೀಡುವ ಬಗ್ಗೆ ಕ್ರಮ ಕೈಗೊಳ್ಳಲು ಹಾಗೂ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಲು ಸಭೆಯು ಒಮ್ಮತದಿಂದ ತೀರ್ಮಾನಿಸಿರುತ್ತದೆ.

**xvi.** ಸಿಂಡಿಕೇಟ್ ಸಭೆಯ ನಿರ್ಣಯದನ್ವಯ ದಿನಾಂಕ:07.09.2020ರಂದು ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು 21.09.2020ರಂದು ಸಭೆಯನ್ನು ನಡೆಸಿ ನಡಾವಳಿಯನ್ನು ಕುಲಸಚಿವರಿಗೆ ಸಲ್ಲಿಸಿದ್ದು, ಸದರಿ ಸಮಿತಿಯು ಕೆಳಕಂಡಂತೆ ನಿರ್ಣಯಿಸಿರುತ್ತದೆ.
"ಎಲ್ಲಾ ದಾಖಲೆಗಳನ್ನು ಕೂಲಂಕುಶವಾಗಿ ಪರಿಶೀಲಿಸಿದ ಸಭೆಯು ಶ್ರೀ ಬಸವರಾಜು ಪಿ.ಎಸ್. ಇವರು ತಮ್ಮ ಪದೋನ್ನತಿಗೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ 11519/2019(S) ಅನ್ನು ದಾಖಲಿಸಿದ್ದು, ಸದರಿ ಪ್ರಕರಣಕ್ಕೆ ವಿಶ್ವವಿದ್ಯಾನಿಲಯವು ತಕರಾರನ್ನು ಸಲ್ಲಿಸಿದ್ದು, ಸದರಿ ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇರುವುದರಿಂದ ಸಮಿತಿಯು ಈ ಕೆಳಕಂಡಂತೆ ನಿರ್ಣಯಿಸಿರುತ್ತದೆ.

ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವುದರಿಂದ ನ್ಯಾಯಾಲಯದ ಅಂತಿಮ ಆದೇಶದಂತೆ ವಿಶ್ವವಿದ್ಯಾನಿಲಯವು ಕ್ರಮವಹಿಸುವಂತೆ ಸಮಿತಿಯು ನಿರ್ಣಯಿಸಿತು."

(ಪು.ತಿ.ನೋ)

ಶ್ರೀ ಬಸವರಾಜು ಪಿ.ಎಸ್., ಕಿರಿಯ ಸಹಾಯಕರು, ವಿವಿ ಕಲಾ ಕಾಲೇಜು ಇವರು ದಿನಾಂಕ 28.07.2021ರ ತಮ್ಮ ಮನವಿಯಲ್ಲಿ ತಮ್ಮ ವೃತ್ತಿ ಪದೋನ್ನತಿಗೆ ಸಂಬಂಧಿಸಿದಂತೆ ಕೆಲವು ಅಂಶಗಳನ್ನು ಅವಗಾಹನೆಗೆ ಸಲ್ಲಿಸಿ, ವಿನಾಕಾರಣ ಮುಂಬಡ್ತಿಯಿಂದ ವಂಚಿತನಾಗಿದ್ದು ದಿನಾಂಕ: 01.12.2016ರಂದು ಜರುಗಿದ ನೇಮಕಾತಿ ಮಂಡಳಿ ಸಭೆಯ ಶಿಫಾರಸ್ಸಿನಂತೆ ದಿನಾಂಕ: 19.01.2011ರಿಂದ ಅನ್ವಯವಾಗುವಂತೆ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ಪದೋನ್ನತಿ ನೀಡದಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ನಾನು ದಾಖಲಿಸಿರುವ ರಿಟ್ ಅರ್ಜಿ ಸಂಖ್ಯೆ: 11519/2019ನ್ನು ಹಿಂಪಡೆಯುತ್ತೇನೆಂಬ ಅಂಶವನ್ನು ತಮ್ಮ ಅವಗಾಹನೆಗೆ ತರುತ್ತಾ ಮುಂಬಡ್ತಿ ನೀಡುವಲ್ಲಿ ನನಗೆ ಆಗಿರುವ ಅನ್ಯಾಯವನ್ನು ಸರಿಪಡಿಸುವಂತೆ ಕೋರಿರುತ್ತಾರೆ.

**ಮೇಲ್ಕಂಡ ಅಂಶಗಳನ್ನು ಹಾಗೂ ಪ್ರಸ್ತುತ ಸ್ವೀಕೃತಗೊಂಡಿರುವ ಸರ್ಕಾರದ ಪತ್ರವನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿ,** ಸದರಿಯವರು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುವುದರಿಂದ ಈ ಕುರಿತು ನ್ಯಾಯಾಲಯವು ನೀಡುವ ಆದೇಶದಂತೆ ಕ್ರಮ ಕೈಗೊಳ್ಳಲು ಶ್ರೀ ಪ್ರಸನ್ನಕುಮಾರ್ ರವರು ಸಭೆಗೆ ತಿಳಿಸಿದರು. ಮುಂದುವರೆದು, ಸದರಿ ಪ್ರಕರಣದ ಕುರಿತು, ಕಾನೂನು ಸಲಹೆ ಪಡೆದು ಮುಂಬರುವ ಸಿಂಡಿಕೇಟ್‌ಗೆ ಕಾರ್ಯಸೂಚಿಯನ್ನು ಮಂಡಿಸಲು ಸಭೆಯು ತೀರ್ಮಾನಿಸಿರುತ್ತದೆ.

**ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರು ಕೆಳಕಂಡಂತೆ ಅಭಿಪ್ರಾಯವನ್ನು ನೀಡಿರುತ್ತಾರೆ:**
"ಶ್ರೀ ಬಸವರಾಜ್ ಪಿ.ಎಸ್.ರವರು ತಮ್ಮ ಪದೋನ್ನತಿಗಾಗಿ ಉಚ್ಚ ನ್ಯಾಯಾಲಯದಲ್ಲಿ W.P. 11519/2019ರಲ್ಲಿ ಪ್ರಕರಣ ದಾಖಲಿಸಿ ಆ ಪ್ರಕರಣದಲ್ಲಿ ಪದೋನ್ನತಿಗಾಗಿ ನ್ಯಾಯಾಲಯದ ನಿರ್ದೇಶನವನ್ನು ತುಮಕೂರು ವಿಶ್ವವಿದ್ಯಾನಿಲಯಕ್ಕೆ ನೀಡುವಂತೆ ಕೋರಿರುತ್ತಾರೆ. ಎರಡನೇ Prayerನಲ್ಲಿ 2011ರಿಂದ ಪದೋನ್ನತಿಗೆ ಅರ್ಹರೆಂದು ಘೋಷಿಸುವಂತೆ ಕೋರಿರುತ್ತಾರೆ. ಮೂರನೇ Prayerನಲ್ಲಿ Higher Pay Scale benefits ನೀಡುವಂತೆ ಕೋರಿರುತ್ತಾರೆ. ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಅಂತಿಮ ಆದೇಶ ಬರುವವರೆಗೂ ಕಾಯಬಹುದಾಗಿರುತ್ತದೆ ಮತ್ತು ಈ ಹಂತದಲ್ಲಿ ಮೇಲಿನ ವಿಷಯದ ಬಗ್ಗೆ ಯಾವ ರೀತಿಯಲ್ಲೂ ತೀರ್ಮಾನಿಸುವುದು ಸೂಕ್ತವಲ್ಲ."

**ಮೇಲ್ಕಂಡ ಅಂಶಗಳನ್ನು ದಿನಾಂಕ:29.11.2021ರಂದ ನಡೆದ ಸಿಂಡಿಕೇಟ್ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿ,** ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರು ನೀಡಿರುವ ಅಭಿಪ್ರಾಯವನ್ನು ಸಿಂಡಿಕೇಟ್ ಸಭೆಯು ಅಂಗೀಕರಿಸಿರುತ್ತದೆ.

**ಶ್ರೀ ಬಸವರಾಜು ಪಿ.ಎಸ್. ಇವರ ಕುವೆಂಪು ವಿಶ್ವವಿದ್ಯಾನಿಲಯದಲ್ಲಿನ ಸೇವಾ ವಿಲೀನೀಕರಣದ ಬಗ್ಗೆ 2020-21ನೇ ಸಾಲಿನಲ್ಲಿ ನಡೆದ ಲೆಕ್ಕಪರಿಶೋಧನೆಯಲ್ಲಿ ಲೆಕ್ಕಪರಿಶೋಧಕರು ಆಕ್ಷೇಪಣೆ ವ್ಯಕ್ತಪಡಿಸಿದ್ದ ಹಿನ್ನೆಲೆಯಲ್ಲಿ ಸದರಿಯವರ ವಿಲೀನಿಕರಣದ ಬಗ್ಗೆ ಕುಲಸಚಿವರು, ಕುವೆಂಪು ವಿಶ್ವವಿದ್ಯಾನಿಲಯ ಇವರಿಗೆ ಹಲವು ಬಾರಿ ಪತ್ರಿಸಲಾಗಿಯೂ ಪ್ರಸ್ತುತದವರೆವಿಗೂ ಯಾವುದೇ ಪ್ರತ್ಯುತ್ತರ ಸ್ವೀಕೃತಗೊಂಡಿರುವುದಿಲ್ಲ.**

ದಿನಾಂಕ:08.02.2023ರ ಪತ್ರದಲ್ಲಿ ಶ್ರೀ ಬಸವರಾಜ್ ಪಿ.ಎಸ್., ಕಿರಿಯ ಸಹಾಯಕರು, ವಿಶ್ವವಿದ್ಯಾನಿಲಯ ಕಲಾ ಕಾಲೇಜು ಇವರು ಕುವೆಂಪು ವಿಶ್ವವಿದ್ಯಾನಿಲಯದಿಂದ ಆಡಳಿತಾತ್ಮಕ ಕಾರಣಗಳ ಹಿನ್ನೆಲೆಯಲ್ಲಿ ಸದರಿಯವರು ತುಮಕೂರು ವಿಶ್ವವಿದ್ಯಾನಿಲಯಕ್ಕೆ ಅಂತರ್ ವಿಶ್ವವಿದ್ಯಾನಿಲಯ ವರ್ಗಾವಣೆಗೊಂಡು ಕಾರ್ಯನಿರ್ವಹಿಸುತ್ತಿದ್ದು, ದಿನಾಂಕ:01.12.2016ರಂದು ನಡೆದ ನೇಮಕಾತಿ ಮಂಡಳಿಯ ಶಿಫಾರಸ್ಸಿನಂತೆ ದಿನಾಂಕ:19.11.2011ರಿಂದ ಅನ್ವಯವಾಗುವಂತೆ ಪದೋನ್ನತಿ ನೀಡಲು ಕೋರಿರುತ್ತಾರೆ.

ಸದರಿಯವರ ಸಕ್ರಮಾತಿ ಅನುಮೋದನೆ, ವಿಶ್ವವಿದ್ಯಾನಿಲಯದ ಇಲಾಖಾ ಪರೀಕ್ಷೆಗಳಿಗೆ ಸಂಬಂಧಿಸಿದ ಪರಿನಿಯಮ, ಬೋಧಕೇತರ ಸಿಬ್ಬಂದಿಗಳ ವೃಂದ ಮತ್ತು ನೇಮಕಾತಿ ನಿಯಮ, ವಿಶ್ವವಿದ್ಯಾನಿಲಯದ ವಿರುದ್ಧ ಸರ್ಕಾರಕ್ಕೆ ಸಲ್ಲಿಸಿರುವ ದೂರು/ಮನವಿಗಳು ಹಾಗೂ ಸಂಬಂಧಪಟ್ಟ ಇತರೆ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ಸೂಕ್ತ ಕಾನೂನು ಅಭಿಪ್ರಾಯವನ್ನು ನೀಡುವಂತೆ **ಶ್ರೀ ಪಿ ರಾಮನಾಥ್, ವಕೀಲರು ಹಾಗೂ ಸಲಹೆಗಾರರು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಕರ್ನಾಟಕ ಸರ್ಕಾರ ಇವರನ್ನು ದಿನಾಂಕ: ದಿನಾಂಕ:08.02.2023ರ ಪತ್ರದಲ್ಲಿ ಕೋರಲಾಗಿ, ಸದರಿಯವರು ಈ ಕೆಳಕಂಡಂತೆ ಅಭಿಪ್ರಾಯವನ್ನು ಸಲ್ಲಿಸಿರುತ್ತಾರೆ.**

(ಪು.ತಿ.ನೋ)

5. Shri P S Basavaraj's initial appointment in Kuvempu Univeristy on 18-12-1997 was temporary on consolidated pay. Though the Kuvempu University by its Order dated 19-01-2006 regularized the appointment of 133 temporary employees, including Shri P S Basavaraj, Government, in exercise of the powers conferred by Section 10(1) of the Karnataka State University Act, 2000, has annulled the regularization made by the Kuvempu University vide its Order dated 06-12-2010 [para 3(vi) above] and reiterated the same vide its letter dated 05-01-2021 [para 3(vii) above]. Thus, as per the records made available, Shri P S Basavaraj's appointment continues to be temporary/ad hoc and he does not hold a post of SDA on regular basis, as per rules.

6. Apart from this, the second proviso to Statute 5 of the "Tumkur University Service and Kannada Examinations for Ministerial Staff 2014 Statute" is contrary to the settled principles of law. The provision "such employee shall be eligible for promotion from the date of eligibility, retrospectively" is opposed to the policy of promotion. Promotions are vacancy based and need based and they are neither automatic on acquiring eligibility nor time bound. An employee has no right for promotion but he has only a right for consideration of promotion according to his turn when promotions are considered. There are several rulings of the Hon'ble Supreme Court in this regard. One important case is that of Union of India - vs - K.V. Janakiraman [(1991) 4 SCC 109], in which the Hon'ble Supreme Court observed as follows, among other things:

*"An employee has no right to promotion. He has only a right to be considered for promotion. The promotion to a post and more so, to a selection post, depends upon several circumstances."*

The circumstances are normally; seniority, eligibility according to rules, passing of the departmental examination, remarks in the annual confidential reports; not facing any departmental inquiry or criminal prosecution etc. Thus promotions are not automatic and only when the promotions are considered by the appointing authority in the normal course and the employee satisfies the eligibility and suitability criteria he can be considered for promotion.

7. In so far as the proceedings of the meeting of the Board of Selection for promotion dated 01-12-2016 is concerned, it is stated in the last para of the proceedings that the Selection Board which is created in accordance with Section 57 of the Karnataka State Universities Act, 2000 has recommended the promotion of Shri P S Basavaraj. As already noted in para 3(ix) above the Board under Section 57 has been adopted by the Tumkur University for promotion also. Section 57 of the Karnataka State Universities Act, 2000 mandates that the Board should comprise of the following eight officers:
   i. The Vice-Chancellor - Ex-officio Chairman;
   ii. The Secretary to Government in charge of Higher Education or his nominee not below the rank of Deputy Secretary to Government;
   iii. The Chairman of the Departmental Council;
   iv. One expert nominated by the Vice-Chancellor;

(ಮು.ಪು.ನೋ)

v. The Registrar;
vi. The Director of Social Welfare or his nominee not below the rank of Deputy Director;
vii. The Director of Backward Classes and Minorities or his nominee not below the rank of Deputy Director;
viii. The Director of Women and Child Development or her nominee not below the rank of Deputy Director;

**The quorum for the meeting is four.**

As seen from the proceedings of the meeting held on 01-12-2016, the Vice Chancellor, the Director, Backward Classes Welfare, the Director of Minorities Department, the Registrar and the Principal, Government First Grade College, Tumkur, are stated to have attended the meeting. But as seen from the signatures to the proceedings the position is different. As per Section 57 the Principal, Government First Grade College, Tumkur has no place in the Board. Further, the Director, Backward Classes Welfare has not signed the proceedings of the meeting. In the case of Director of Minorities Department it is the Superintendent who has signed the proceedings which is not valid as only an officer not below the rank of Deputy Director can represent the Director. Only two officers, namely, the Vice Chancellor and the Registrar have validly signed the proceedings of the meeting held on 01-12-2016, as such there is lack of quorum and the proceedings are invalid. In spite of it the said proceedings were placed before the Syndicate twice and the Syndicate has not accepted it. Under the circumstances the question of considering the promotion of Shri P S Basavaraj on the basis of the proceedings of the meeting held on 01-12-2016 does not arise.

8. Thus, Shri P S Basavaraj is a temporary employee and not holding the post of a SDA regularly as per rules. He is not eligible to be promoted, hence the question of considering him for promotion to the cadre of FDA does not arise.

**ಪ್ರಸ್ತುತ ಸದರಿಯವರು ನ್ಯಾಯಾಲಯದಲ್ಲಿ ಹೂಡಿದ್ದ ದಾವೆ ಸಂಖ್ಯೆ WP 11519/2019 ಕ್ಕೆ ಸಂಬಂಧಿಸಿದಂತೆ ಘನ ಉಚ್ಛ ನ್ಯಾಯಾಲಯದಿಂದ ತೀರ್ಪು ಸ್ವೀಕೃತಗೊಂಡಿದ್ದು, ಈ ಕೆಳಕಂಡಂತಿರುತ್ತದೆ.**

"Without expressing any opinion the merit of the case, respondent-University shall consider the case of the petitioner as per representation dated 22.02.2023 (Annexure-AD) in accordance with law within an outer limit of eight weeks from the date of receipt of certified copy of this order and outcome of the same, be made known to the petitioner.

Accordingly, the writ petition is disposed of."

**ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಬಸವರಾಜು ಪಿ.ಎಸ್., ದ್ವಿತೀಯ ದರ್ಜೆ ಸಹಾಯಕರು ಇವರ ಪದೋನ್ನತಿಯ ಸಂಬಂಧ ಸಿಂಡಿಕೇಟ್ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.**

| ವಿಷಯ ಸಂಖ್ಯೆ | 2022–23/ವಿ.ಸಿಂ.–03: ಸಿಬ್ಬಂದಿ–03 ದಿನಾಂಕ:28.06.2023 |
|---|---|

**ಷಯ: ಡಾ. ಸುರೇಶ್ ಬಿ.ಕೆ., ಸಹಾಯಕ ಪ್ರಾಧ್ಯಾಪಕರು ಇವರನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಉಪಕುಲಸಚಿವರ ಹುದ್ದೆಯ ಹೆಚ್ಚುವರಿ ಪ್ರಭಾರದಲ್ಲಿರಿಸಿರುವುದನ್ನು ಸ್ಥಿರೀಕರಿಸುವ ಕುರಿತು.**

* * * * *

ಪತ್ರ ಸಂಖ್ಯೆ:ಇಡಿ 69 ಯುಎನ್ಇ 2023 ದಿನಾಂಕ: 27.04.2023ರಲ್ಲಿ ಡಾ. ಸುರೇಶ್ ಬಿ.ಕೆ., ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ ಇವರನ್ನು ಪ್ರಸ್ತುತ ನಿರ್ವಹಿಸುತ್ತಿರುವ ಕಾರ್ಯಭಾರದ ಜೊತೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಉಪಕುಲಸಚಿವ ಹುದ್ದೆಗೆ ಸರ್ಕಾರದ ಮುಂದಿನ ಆದೇಶದವರೆಗೆ ನಿಯಮಾನುಸಾರ ಹೆಚ್ಚುವರಿ ಪ್ರಭಾರದಲ್ಲಿರಿಸಿಕೊಳ್ಳಲು ಸಹಮತಿ ನೀಡಿರುವುದಾಗಿ ತಿಳಿಸಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆದೇಶ ಸಂಖ್ಯೆ:ಕಸಂವಿ/ಹೆ.ಅ.ಪ್ರ.ಕ.01/2023–24/16–3 ದಿನಾಂಕ:04.05.2023 ರಲ್ಲಿ ಸದರಿಯವರನ್ನು ಮುಂದಿನ ಆದೇಶದವರೆಗೆ ಕರ್ನಾಟಕ ನಾಗರಿಕ ಸೇವಾ ನಿಯಮ (32) ಹಾಗೂ (68)ರಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಉಪಕುಲಸಚಿವರ ಹುದ್ದೆಯಲ್ಲಿ ಹೆಚ್ಚುವರಿ ಪ್ರಭಾರದಲ್ಲಿರಿಸಿ ಆದೇಶಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಡಾ. ಸುರೇಶ್ ಬಿ.ಕೆ., ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ ಇವರನ್ನು ತುಮಕೂರು ವಿಶ್ವವಿದ್ಯಾನಿಲಯದ ದೈನಂದಿನ ಶೈಕ್ಷಣಿಕ/ ಇತರೆ ಕಾರ್ಯಚಟುವಟಿಕೆಗಳು, ಜವಾಬ್ದಾರಿಗಳು ಹಾಗೂ ಪ್ರಸ್ತುತ ನಿರ್ವಹಿಸುತ್ತಿರುವ ಕಾರ್ಯಭಾರಕ್ಕೆ ಯಾವುದೇ ತೊಂದರೆಯಾಗದಂತೆ ವಾರದಲ್ಲಿ ಕನಿಷ್ಠ 03 ದಿನಗಳ ಕಾಲ ಪೂರ್ಣಾವಧಿ ವಿಶ್ವವಿದ್ಯಾನಿಲಯದಲ್ಲಿ ಕಡ್ಡಾಯವಾಗಿ ಹಾಜರಿದ್ದು, ಕರ್ತವ್ಯ ನಿರ್ವಹಿಸುವ ಷರತ್ತಿಗೊಳಪಟ್ಟು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆದೇಶ ಸಂಖ್ಯೆ:ಕಸಂವಿ/ಹೆ.ಅ.ಪ್ರ.ಕ.01/2023–24/16–3 ದಿನಾಂಕ:04.05.2023 ರ ಆದೇಶದನ್ವಯ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಉಪಕುಲಸಚಿವರ ಹುದ್ದೆಯ ಹೆಚ್ಚುವರಿ ಪ್ರಭಾರವನ್ನು ನಿರ್ವಹಿಸಲು ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕೊಳಪಟ್ಟು ಮುಂದಿನ ಆದೇಶದವರೆಗೆ ಅನುಮತಿಸಿ ದಿನಾಂಕ:22.05.2023ರಂದು ಹೊರಡಿಸಿರುವ ಆದೇಶವನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022-23/ವಿ.ಸಿಂ-03: ಸಿಬ್ಬಂದಿ-04 ದಿನಾಂಕ:28.06.2023 |
|---|---|

ವಿಷಯ: ವಿಶ್ವವಿದ್ಯಾನಿಲಯದಲ್ಲಿ ನೂತನವಾಗಿ ಪ್ರಾರಂಭಿಸುವ ವಿವಿಧ ಕೋರ್ಸ್‌ಗಳಿಗೆ ಸಂಯೋಜಕರನ್ನು ನೇಮಿಸಿ, ಆದೇಶಿಸಿರುವುದನ್ನು ಸ್ಥಿರೀಕರಿಸುವ ಕುರಿತು.

*****

ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಪ್ರಸಕ್ತ 2023-24ನೇ ಶೈಕ್ಷಣಿಕ ಸಾಲಿಗೆ ಸಂಬಂಧಿಸಿದಂತೆ, ನೂತನವಾಗಿ ಆರಂಭಿಸುವ ವಿಷಯಗಳಲ್ಲಿ LLM, (Cyber Law) PG Diploma in Information Technology, ಹಾಗೂ ಇಂಜಿನಿಯರಿಂಗ್ ಕಾಲೇಜು (Fashion Technology & Interior Designing) ಹಾಗೂ Paramedical Course ಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿರುತ್ತದೆ.

ಡಾ. ಮೋಹನ್ ರಾಂ, ಅತಿಥಿ ಉಪನ್ಯಾಸಕರು, ಸ್ನಾತಕೋತ್ತರ ವ್ಯವಹಾರ ಆಡಳಿತ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಇವರನ್ನು ಮುಂದಿನ ಆದೇಶದವರೆಗೆ ಈ ಮೇಲ್ಕಂಡ ನೂತನವಾಗಿ ಪ್ರಾರಂಭಿಸುವ ಕೋರ್ಸ್‌ಗಳಿಗೆ ಪ್ರಸಕ್ತ ಶೈಕ್ಷಣಿಕ ಸಾಲಿಗೆ ಸಂಯೋಜಕರನ್ನಾಗಿ ನೇಮಿಸಿ, ದಿನಾಂಕ:04.05.2023ರಂದು ಆದೇಶಿಸಿರುವುದನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022–23: ವಿ.ಸಿಂ–3: ಶೈವಿ :07:ದಿನಾಂಕ:28.06.2023 |
|---|---|

**ವಿಷಯ: ತುಮಕೂರು ವಿಶ್ವವಿದ್ಯಾನಿಲಯದ ನೂತನ ಬಿದರಕಟ್ಟೆ ಕ್ಯಾಂಪಸ್‌ನಲ್ಲಿ ಪದವಿ ಕಾಲೇಜನ್ನು ಪ್ರಾರಂಭಿಸುವ ಕುರಿತು.**

* * *

ಶ್ರೀ ಬಿ.ಸುರೇಶ್ ಗೌಡ, ಶಾಸಕರು, ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರ ಇವರು ನಾಗವಲ್ಲಿ ಗ್ರಾಮದ ಸುತ್ತಮುತ್ತಲಿನ ಗ್ರಾಮಗಳಲ್ಲಿ ರೈತರು, ಬಡವರು, ಕೂಲಿಕಾರ್ಮಿಕರ ಮಕ್ಕಳ ಉನ್ನತ ವ್ಯಾಸಂಗಕ್ಕೆ ಮತ್ತು ಗುಣಮಟ್ಟದ ಶಿಕ್ಷಣಕ್ಕೆ ಅನುಕೂಲವಾಗುವಂತೆ ಮಾನ್ಯ ಶಾಸಕರ ಅನುದಾನದಿಂದ ಮತ್ತು ಇತರೆ ದಾನಿಗಳಿಂದ ಸ್ವೀಕೃತಗೊಂಡ ಅನುದಾನವನ್ನು ಕ್ರೋಢೀಕರಿಸಿ, ಒಂದು ಹೊಸ ಪದವಿ ಕಾಲೇಜನ್ನು ತುಮಕೂರು ವಿಶ್ವವಿದ್ಯಾನಿಲಯದ ನೂತನ ಬಿದರಕಟ್ಟೆ ಕ್ಯಾಂಪಸ್‌ನಲ್ಲಿ ಪ್ರಾರಂಭಿಸುವಂತೆ ಮನವಿ ಸಲ್ಲಿಸಿರುವ ಸಂಬಂಧ ಕಾರ್ಯಪಾಲಕ ಅಭಿಯಂತರರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರು ಸಿದ್ಧಪಡಿಸಿ ಸಲ್ಲಿಸಿರುವ ಕಟ್ಟಡ ನಿರ್ಮಾಣಕ್ಕೆ ತಗಲುವ ಅಂದಾಜು ಪಟ್ಟಿಯನ್ನು ಮತ್ತು ನಕ್ಷೆಯನ್ನು ಸಿದ್ಧಪಡಿಸಿದ್ದು, ನೂತನ ಪದವಿ ಕಾಲೇಜನ್ನು ಪ್ರಾರಂಭಿಸುವ ಸಂಬಂಧ ವಿಷಯವನ್ನು ಸಿಂಡಿಕೇಟ್ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ: | **2023: ಸಾ.ಸಿಂ -01- ಪಿಹೆಚ್.ಡಿ –01– ದಿನಾಂಕ:28.06.2023** |
|---|---|

**ವಿಷಯ**: 2015-16 ನೇ ಸಾಲಿನ ಸಂಶೋಧನಾರ್ಥಿಗಳ ಪಿಹೆಚ್.ಡಿ ಸಂಶೋಧನೆಯ ಅವಧಿ ವಿಸ್ತರಿಸುವ ಕುರಿತು.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, **2015-16** ನೇ ಸಾಲಿನ ಸಂಶೋಧನಾರ್ಥಿಗಳ ಪಿಹೆಚ್.ಡಿ ನೊಂದಣಿಯು ಗರಿಷ್ಠ ಆರನೇ ವರ್ಷದ ಸಂಶೋಧನಾ ಅವಧಿಯನ್ನು ವಿಸ್ತರಿಸಲು ದಿನಾಂಕ:**17.05.2023**ರ ಸಿಂಡಿಕೇಟ್ ಸಭೆಯ ನಿರ್ಣಯದಂತೆ, ವಿಭಾಗದ ಡಾಕ್ಟರಲ್ ಕಮಿಟಿ ಅಧ್ಯಕ್ಷರು/ಸಂಯೋಜಕರು ಹಾಗೂ ಸಂಶೋಧನಾರ್ಥಿಗಳಿಗೆ ಸೂಕ್ತ ಕಾರಣ ಮತ್ತು ಅಗತ್ಯ ಪೂರಕ ದಾಖಲೆಗಳನ್ನು ಶಿಫಾರಸ್ಸಿನೊಂದಿಗೆ ಸಲ್ಲಿಸುವಂತೆ ತಿಳಿಸಲಾಗಿತ್ತು,

ಅದರಂತೆ, ಡಾಕ್ಟರಲ್ ಕಮಿಟಿ ಅಧ್ಯಕ್ಷರು/ಸಂಯೋಜಕರು ಸಂಶೋಧನಾರ್ಥಿಗಳು ಸಲ್ಲಿಸಿರುವ ಕಾರಣ ಮತ್ತು ಪೂರಕ ದಾಖಲೆಗಳು ಹಾಗೂ ವಿಭಾಗದ ಡಾಕ್ಟರಲ್ ಕಮಿಟಿ ಶಿಫಾರಸ್ಸಿನ ವಿವರಣೆಯನ್ನು ಅನುಬಂಧದ ಕೋಷ್ಠಕದಲ್ಲಿ ಲಗತ್ತಿಸಿದೆ.

ಈ ಸಂಬಂಧ **2015-16** ನೇ ಸಾಲಿನ ಸಂಶೋಧನಾರ್ಥಿಗಳ ಸಂಶೋಧನಾ ಅವಧಿಯನ್ನು ವಿಸ್ತರಿಸಲು ಸಲ್ಲಿಸಿರುವ ಕಾರಣಗಳು, ದಾಖಲೆಗಳನ್ನು ಮತ್ತು ವಿಭಾಗದ ಡಾಕ್ಟರಲ್ ಕಮಿಟಿ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.